# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಮಂಜುನಾಥ್ ಭಂಡಾರಿ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **832** |
| **ಉತ್ತರಿಸಬೇಕಾದ ದಿನಾಂಕ** | : | **23.07.2024** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗುತ್ತಿರುವ ವಿವಿಧ ರೀತಿಯ ಸಹಕಾರ ಸಂಘಗಳು ಯಾವುವು; ಇವುಗಳನ್ನು ಸ್ಥಾಪಿಸಲು ಇರುವ ನಿಯಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 6, 7 ಮತ್ತು 8 ರ ವರೆಗಿನ ಅವಕಾಶಗಳಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 3, 3-ಎ ಹಾಗೂ 3-ಬಿ ಈ ಅವಕಾಶಗಳ ರೀತ್ಯಾ 50 ವಿವಿಧ ಮಾದರಿಯ ಸಹಕಾರ ಸಂಘಗಳನ್ನು ನೋಂದಾಯಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಇವುಗಳನ್ನು ನೋಂದಣಿ ಮಾಡಲು ಆಯಾ ವ್ಯಾಪ್ತಿಯ ನಿಬಂಧಕರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. ವಿವರವನ್ನು **ಅನುಬಂಧ-1 ರಿಂದ 3** ರಲ್ಲಿ ನೀಡಲಾಗಿದೆ. |
| ಆ) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗಿರುವ ವಿವಿಧ ರೀತಿಯ ಸಹಕಾರ ಸಂಘಗಳು ಯಾವುವು; (ಪ್ರತ್ಯೇಕ ಮಾಹಿತಿ ನೀಡುವುದು) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗಿರುವ ವಿವಿಧ ರೀತಿಯ ಸಹಕಾರ ಸಂಘಗಳ ಮಾಹಿತಿಯನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. |
| ಇ) | ವಿವಿಧ ಸಹಕಾರಿ ಸಂಘ ಹಾಗೂ ಸಂಸ್ಥೆಗಳಲ್ಲಿ ಅಧಿಕಾರಿ ಸಿಬ್ಬಂದಿ ನೇಮಕಾತಿ ನಿಯಮಗಳೇನು ಅವರಿಗೆ ಅನ್ವಯಿಸುವ ಸೇವಾ ನಿಯಮಗಳೇನು; (ವೇತನ ಭತ್ಯೆ ಸಹಿತ ಎಲ್ಲಾ ವಿವರಗಳನ್ನು ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 17, 17ಎ, ಹಾಗೂ 18 ರ ಅವಕಾಶಗಳ ರೀತ್ಯಾ ನೇಮಕ ಮಾಡಿಕೊಳ್ಳುವ ಅಧಿಕಾರವು ಆಯಾ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಇರುತ್ತದೆ. ನೇಮಕಾತಿ ನಿಯಮಗಳು ಮತ್ತು ಸೇವಾ ನಿಯಮಗಳ ಮಾಹಿತಿಯನ್ನು **ಅನುಬಂಧ-5ರಲ್ಲಿ** ನೀಡಲಾಗಿದೆ. |
| ಈ) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸಹಕಾರ ಇಲಾಖೆಯ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳ ಕಛೇರಿಗಳಲ್ಲಿ ಅನುಮೋದಿತ ಹುದ್ದೆಗಳೆಷ್ಟು; ಅವುಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳೆಷ್ಟು; ಹುದ್ದೆಗಳು ಖಾಲಿಯಿರಲು ಕಾರಣವೇನು; | ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು 49 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 15 ಹುದ್ದೆಗಳಲ್ಲಿ ಅಧಿಕಾರಿ / ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಬಾಕಿ 34 ಹುದ್ದೆಗಳು ಖಾಲಿ ಇರುತ್ತವೆ.<br><br>ಉಡುಪಿ ಜಿಲ್ಲೆಗೆ ಒಟ್ಟು 37 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 08 ಹುದ್ದೆಗಳಲ್ಲಿ ಅಧಿಕಾರಿ / ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಪದೋನ್ನತಿಯಿಂದ ಹಾಗೂ ವಯೋನಿವೃತ್ತಿಯಿಂದ 29 ಹುದ್ದೆಗಳು ಖಾಲಿ ಇರುತ್ತವೆ. ಸದರಿ ಹುದ್ದೆಗಳಿಗೆ ನೇಮಕಾತಿ ಆಗದೆ ಇರುವುದರಿಂದ ಖಾಲಿ ಇರುತ್ತವೆ.<br><br>ಜಿಲ್ಲಾವಾರು ಹಾಗೂ ವೃಂದಾವಾರು ಮಾಹಿತಿ ಈ ಕೆಳಕಂಡಂತಿರುತ್ತದೆ.<br>1. **ದಕ್ಷಿಣ ಕನ್ನಡ ಜಿಲ್ಲೆ** |

| ಕ್ರ. ಸಂ | ಹುದ್ದೆಯ ವಿವರ | ಮಂಜೂರಾದ ಹುದ್ದೆ | ಕಾರ್ಯನಿರತ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1. | ಸಹಕಾರ ಸಂಘಗಳ ಉಪ ನಿಬಂಧಕರು | 1 | 1 | 0 |

| | | | | |
|---|---|---|---|---|
| 2. | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 2 | 2 | 0 |
| 3. | ಸಹಕಾರ ಅಭಿವೃದ್ಧಿ ಅಧಿಕಾರಿ | 6 | 5 | 1 |
| 4. | ಅಧೀಕ್ಷಕರು | 3 | 2 | 1 |
| 5. | ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು | 2 | 1 | 1 |
| 6. | ಸಹಕಾರ ಸಂಘಗಳ ನಿರೀಕ್ಷಕರು | 12 | 0 | 12 |
| 7. | ಪ್ರಥಮ ದರ್ಜೆ ಸಹಾಯಕರು | 3 | 2 | 1 |
| 8. | ದ್ವಿತೀಯ ದರ್ಜೆ ಸಹಾಯಕರು | 7 | 1 | 6 |
| 9. | ಶೀಘ್ರಲಿಪಿಗಾರರು | 1 | 0 | 1 |
| 10. | ಹಿರಿಯ ಬೆರಳಚ್ಚುಗಾರರು / ಬೆರಳಚ್ಚುಗಾರರು | 3 | 0 | 3 |
| 11. | ಹಿರಿಯ ವಾಹನ ಚಾಲಕರು / ವಾ.ಚಾಲಕರು | 2 | 0 | 2 |
| 12. | ಜಾರಿಗಾರರು | 2 | 1 | 1 |
| 13. | ಡಿ ದರ್ಜೆ ನೌಕರರು | 5 | 0 | 5 |
| | ಒಟ್ಟು | **49** | **15** | **34** |

2**. <u>ಉಡುಪಿ ಜಿಲ್ಲೆ</u>**

| ಕ್ರ ಸಂ | ಹುದ್ದೆಯ ವಿವರ | ಮಂಜೂರಾದ ಹುದ್ದೆ | ಕಾರ್ಯನಿರತ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1. | ಸಹಕಾರ ಸಂಘಗಳ ಉಪ ನಿಬಂಧಕರು | 1 | 1 | 0 |
| 2. | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 1 | 1 | 0 |
| 3. | ಸಹಕಾರ ಅಭಿವೃದ್ಧಿ ಅಧಿಕಾರಿ | 3 | 3 | 0 |
| 4. | ಅಧೀಕ್ಷಕರು | 2 | 1 | 1 |
| 5. | ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು | 3 | 0 | 3 |
| 6. | ಸಹಕಾರ ಸಂಘಗಳ ನಿರೀಕ್ಷಕರು | 8 | 0 | 8 |
| 7. | ಪ್ರಥಮ ದರ್ಜೆ ಸಹಾಯಕರು | 2 | 2 | 0 |
| 8. | ದ್ವಿತೀಯ ದರ್ಜೆ ಸಹಾಯಕರು | 6 | 0 | 6 |
| 9. | ಶೀಘ್ರಲಿಪಿಗಾರರು | 1 | 0 | 1 |
| 10. | ಹಿರಿಯ ಬೆರಳಚ್ಚುಗಾರರು / ಬೆರಳಚ್ಚುಗಾರರು | 2 | 0 | 2 |

| | | | | | | |
|---|---|---|---|---|---|---|
| | | 11. | ಹಿರಿಯ ವಾಹನ ಚಾಲಕರು / ವಾ.ಚಾಲಕರು | 2 | 0 | 2 |
| | | 12 | ಜಾರಿಗಾರರು | 1 | 0 | 1 |
| | | 13 | ಡಿ ದರ್ಜೆ ನೌಕರರು | 5 | 0 | 5 |
| | | | ಒಟ್ಟು | **37** | **08** | **29** |

| | | |
|---|---|---|
| ಉ) | ಉಭಯ ಜಿಲ್ಲೆಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇರುವುದರಿಂದ ಸಹಕಾರ ಕ್ಷೇತ್ರದ ಅನೇಕ ಕೆಲಸಗಳಿಗೆ ತೊಂದರೆಯಾಗಿದ್ದು, ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 03 ಡೇಟಾ ಎಂಟ್ರಿ ಅಪರೇಟರ್ಸ್ (ಬೆರಳಚ್ಚುಗಾರರು), 02 ವಾಹನ ಚಾಲಕರು ಮತ್ತು 01 ಗ್ರೂಪ್ ಡಿ ಒಟ್ಟು 06 ಹುದ್ದೆಗಳು ಮತ್ತು ಉಡುಪಿ ಜಿಲ್ಲೆಯಲ್ಲಿ 02 ಡೇಟಾ ಎಂಟ್ರಿ ಅಪರೇಟರ್ಸ್ (ಬೆರಳಚ್ಚುಗಾರರು), 01 ವಾಹನ ಚಾಲಕರು ಮತ್ತು 03 ಗ್ರೂಪ್ ಡಿ ಒಟ್ಟು 06 ಹುದ್ದೆಗಳನ್ನು ಬಾಹ್ಯ ಮೂಲದ ಆಧಾರದ ಮೇಲೆ ಏಜೆನ್ಸಿಗಳಿಂದ ಸೇವೆಯನ್ನು ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ. ಅಲ್ಲದೇ ಉಳಿಕೆ ಮೂಲ ವೃಂದದ 47 ಸಹಕಾರ ಸಂಘಗಳ ನಿರೀಕ್ಷಕರ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಊ) | ಉಭಯ ಜಿಲ್ಲೆಗಳಲ್ಲಿ ಈವರೆಗೆ ರಾಜ್ಯ ಸರ್ಕಾರವು ಘೋಷಿಸಿದ ಕೃಷಿ ಸಾಲದ ಮೇಲಿನ ಬಡ್ಡಿ ರಿಯಾಯಿತಿ ಮೊತ್ತವೆಷ್ಟು; ಸಹಕಾರ ಸಂಘಗಳಿಗೆ ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು; ಬಾಕಿಯಿರಲು ಕಾರಣವೇನು? (ಸಂಘವಾರು ಸಂಪೂರ್ಣ ಮಾಹಿತಿ ನೀಡುವುದು) | ಕೃಷಿ ಸಾಲದ ಮೇಲಿನ ಬಡ್ಡಿ ರಿಯಾಯಿತಿ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 2023-24 ನೇ ಸಾಲಿನಲ್ಲಿ ವಸೂಲಾದ ಸಾಲಗಳಿಗೆ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ 191.93 ಕೋಟಿಗಳ ಬಡ್ಡಿ ಸಹಾಯ ಧನದ ಕ್ಲೇಂ ಬಿಲ್ಲುಗಳನ್ನು ಸಲ್ಲಿಸಿದ್ದು, ಮಾರ್ಚ್ 2024 ರ ಅಂತ್ಯದವರೆಗೆ 3.71 ಕೋಟಿಗಳ ಅನುದಾನ ಬಿಡುಗಡೆ ಮಾಡಿದ್ದು, ರೂ.188.21 ಕೋಟಿಗಳು ಬಿಡುಗಡೆಗೆ ಬಾಕಿ ಇರುತ್ತವೆ.<br><br>ಸಹಕಾರ ಸಂಘಗಳು ಸಾಲ ವಸೂಲಾತಿ ಆದ ತ್ರೈಮಾಸಿಕದ ನಂತರ ಬಿಲ್ಲು ಸಲ್ಲಿಸಬೇಕಿದ್ದು, ಮಾರ್ಚ್ 2024 ರಲ್ಲಿ ವಸೂಲಾದ ಸಾಲಗಳಿಗೆ ಡಿಸಿಸಿ ಬ್ಯಾಂಕ್ ಏಪ್ರಿಲ್ 2024 ರಲ್ಲಿ ಬಿಲ್ಲು ಸಲ್ಲಿಸಿರುವುದರಿಂದ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ. ಸಹಕಾರ ಸಂಘಗಳಿಗೆ ಡಿಸಿಸಿ ಬ್ಯಾಂಕ್ ವಿತರಿಸಿದ ಸಾಲಕ್ಕೆ ಯಾವುದೇ ಬಡ್ಡಿ ವಸೂಲು ಮಾಡಬೇಕಾಗಿರುವುದಿಲ್ಲ. ಬಿಡುಗಡೆಗೆ ಬಾಕಿ ಇರುವ ಮೊತ್ತದಲ್ಲಿ ಡಿಸಿಸಿ ಬ್ಯಾಂಕಿನ ವೆಚ್ಚ ಮತ್ತು ಪ್ಯಾಕ್ಸ್ ಮಾರ್ಜಿನ್ ಶೇ. 2ನ್ನು ಒಳಗೊಂಡಿದ್ದು, ಬ್ಯಾಂಕಿಗೆ ಅನುದಾನ ಬಿಡುಗಡೆ ಮಾಡಿದ ಮೊತ್ತದಲ್ಲಿ ಶೇ.2ನ್ನು ಪ್ಯಾಕ್ಸ್ ಗಳಿಗೆ ವರ್ಗಾಯಿಸಬೇಕಿರುತ್ತದೆ.<br><br>2024-25 ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ ರೂ.1451.03 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ಈ ಮೊತ್ತದಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು.<br><br>ಸಂಘವಾರು ಮಾಹಿತಿಯನ್ನು **ಅನುಬಂಧ- 6** ರಲ್ಲಿ ನೀಡಲಾಗಿದೆ. |

**ಸಿಒ 103 ಸಿಎಲ್ಎಂ 2024 (ಇ)**

K. N. Rajanna

**(ಕೆ. ಎನ್. ರಾಜಣ್ಣ)**
**ಸಹಕಾರ ಸಚಿವರು**

ಅನು 2025-1

# ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗುತ್ತಿರುವ ವಿವಿಧ ರೀತಿಯ ಸಹಕಾರ ಸಂಘಗಳ ವಿವರ

| ಕ.ಸಂ | ವಿವಿಧ ಸಹಕಾರ ಸಂಘಗಳು |
|---|---|
| 1 | 2 |
| 1 | ಬಹುರಾಜ್ಯ ಮಟ್ಟದ ಸಹಕಾರ ಸಂಘಗಳು |
| 2 | ರಾಜ್ಯಮಟ್ಟದ ಸಹಕಾರ ಸಂಘಗಳು |
| 3 | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು |
| 4 | ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು |
| 5 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು |
| 6 | ಲ್ಯಾಂಪ್ಸ್ ಸಹಕಾರ ಸಂಘಗಳು |
| 7 | ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು |
| 8 | ಸಹಕಾರ ಗ್ರೈನ್ ಬ್ಯಾಂಕ್‌ಗಳು |
| 9 | ಪಟ್ಟಣ ಸಹಕಾರ ಬ್ಯಾಂಕ್‌ಗಳು |
| 10 | ಇತರೆ ಪತ್ತಿನ ಸಹಕಾರ ಸಂಘಗಳು |
| 11 | ನೌಕರರ ಪತ್ತಿನ ಸಹಕಾರ ಸಂಘಗಳು |
| 12 | ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘಗಳು |
| 13 | ಇತರೇ ಮಾರಾಟ ಸಹಕಾರ ಸಂಘಗಳು |
| 14 | ಸಹಕಾರ ಸಕ್ಕರೆ ಕಾರ್ಖಾನೆ |
| 15 | ಸಂಸ್ಕರಣ ಸಹಕಾರ ಸಂಘಗಳು |
| 16 | ಸಹಕಾರ ನೂಲಿನ ಗಿರಣಿ |
| 17 | ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳು |
| 18 | ಲೈವ್‌ಸ್ಟಾಕ್ ಸಹಕಾರ ಸಂಘಗಳು<br>(ಪಶು ಸಂಗೋಪನೆ, ಕೋಳಿ, ಕುರಿ, ಹಂದಿ ಸಾಕಾಣಿಕೆ ಇತ್ಯಾದಿ) |
| 19 | ಹಾಲು ಉತ್ಪಾದಕರ ಸಹಕಾರ ಸಂಘಗಳು |
| 20 | ಸಹಕಾರಿ ಹಾಲು ಒಕ್ಕೂಟ |
| 21 | ಸಂಯುಕ್ತ ಬೇಸಾಯ ಸಹಕಾರ ಸಂಘಗಳು |
| 22 | ಏತ ನೀರಾವರಿ ಸಹಕಾರ ಸಂಘಗಳು |
| 23 | ನೀರು ಬಳಕೆದಾರರ ಸಹಕಾರ ಸಂಘಗಳು |
| 24 | ಮೀನುಗಾರಿಕೆ ಸಹಕಾರ ಸಂಘಗಳು |
| 25 | ನೇಕಾರರ ಸಹಕಾರ ಸಂಘಗಳು |
| 26 | ಇತರೆ ಕೈಗಾರಿಕಾ ಸಹಕಾರ ಸಂಘಗಳು |

| | |
|---|---|
| 27 | ಕೈಗಾರಿಕಾ ಸಹಕಾರ ಸಂಘಗಳು |
| 28 | ಗ್ರಾಹಕರ ಸಹಕಾರ ಸಂಘಗಳು |
| 29 | ಕೇಂದ್ರ ಸಹಕಾರ ಸಗಟು ಮಳಿಗೆ |
| 30 | ಗೃಹ ನಿರ್ಮಾಣ ಸಹಕಾರ ಸಂಘಗಳು |
| 31 | ಅರಣ್ಯ ಕುಲಿಗಾರರ ಸಹಕಾರ ಸಂಘಗಳು |
| 32 | ಕಾರ್ಮಿಕರ ಸಹಕಾರ ಸಂಘಗಳು |
| 33 | ಜಿಲ್ಲಾ ಸಹಕಾರ ಒಕ್ಕೂಟ |
| 34 | ಜಿಲ್ಲಾ ಸಹಕಾರ ಮಹಮಂಡಳಿ |
| 35 | ವಿವಿದೋದ್ದೇಶ ಸಹಕಾರ ಸಂಘಗಳು |
| 36 | ವಿದ್ಯಾರ್ಥಿ ಗ್ರಾಹಕರ ಸಹಕಾರ ಸಂಘಗಳು |
| 37 | ಕ್ಷೌರಿಕ ಸಹಕಾರ ಸಂಘಗಳು |
| 38 | ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು |
| 39 | ಗರೀಬಿ ಹಠಾವೊ ಸಹಕಾರ ಸಂಘಗಳು |
| 40 | ದರ್ಜಿಗಳ ಸಹಕಾರ ಸಂಘಗಳು |
| 41 | ಚರ್ಮಹದ ಮಾಡುವ ಸಹಕಾರ ಸಂಘಗಳು |
| 42 | ಮರ ಬೆಳೆಗಾರರ ಸಹಕಾರ ಸಂಘಗಳು |
| 43 | ಹ್ಯಾಂಡ್ ಪೌಂಡಿಂಗ್ ಸಹಕಾರ ಸಂಘಗಳು |
| 44 | ಮಡಿವಾಳ ಸಹಕಾರ ಸಂಘಗಳು |
| 45 | ವಿದ್ಯುಚ್ಚಕ್ತಿ ಸಹಕಾರ ಸಂಘಗಳು |
| 46 | ಸಾರಿಗೆ ಸಹಕಾರ ಸಂಘಗಳು |
| 47 | ಸಹಕಾರಿ ಅಸ್ಪತ್ರೆಗಳು |
| 48 | ಸಹಕಾರಿ ಮುದ್ರಣಗಳು |
| 49 | ಉಣ್ಣೆ ನೇಕಾರರ ಸಹಕಾರ ಸಂಘಗಳು |
| 50 | ಇತರೆ ಸಹಕಾರ ಸಂಘಗಳು |

ಸಹಕಾರ ಸಂಘಗಳ ಜಂಟಿ ನಿಬಂಧಕರು
ಕಾನೂನು ಕೋಶ

# <u>ಅನುಬಂಧ -2</u>

## <u>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ</u>

**<u>ಪ್ರಕರಣ -6</u>:- <u>ಸಹಕಾರ ಸಂಘಗಳ ನೋಂದಣಿಗಾಗಿ ಅರ್ಜಿ</u>.** (1) ಯಾವೊಂದು ಸಹಕಾರ ಸಂಘದ ನೋಂದಣಿಗಾಗಿ ನಿಯಮಿಸಬಹುದಾದ [ಅಂಥ ವಿಧಿ ವಿಧಾನಗಳನ್ನು ಪಾಲಿಸಿದ ತರುವಾಯ ಮತ್ತು] ಅಂಥ ನಮೂನೆಯಲ್ಲಿ ಅರ್ಜಿಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕುದು; ಮತ್ತು ಅರ್ಜಿದಾರರು ಸಂಘದ ಬಗ್ಗೆ ಅವನು ಅಗತ್ಯಪಡಿಸಬಹುದಾದಂಥ ಎಲ್ಲ ಮಾಹಿತಿಯನ್ನು ಒದಗಿಸತಕ್ಕುದು.

(2) ಅಂಥ ಪ್ರತಿಯೊಂದು ಅರ್ಜಿಯು, ಈ ಮುಂದಿನ ಅಗತ್ಯಗಳಿಗೆ ಅನುಗುಣವಾಗಿ ಇರತಕ್ಕುದು, ಎಂದರೆ.

(ಎ) ಅರ್ಜಿಯ ಜೊತೆಯಲ್ಲಿ ಸಹಕಾರ ಸಂಘದ ಪ್ರಸ್ತಾವಿತ ಉಪವಿಧಿಗಳ [ಐದು] ಪ್ರತಿಗಳನ್ನು ಲಗತ್ತಿಸತಕ್ಕುದು;

[(ಬಿ) ಎಲ್ಲಾ ಅರ್ಜಿದಾರರು ವ್ಯಕ್ತಿಗಳಾಗಿರುವಲ್ಲಿ, ಅರ್ಜಿದಾರರ ಸಂಖ್ಯೆಯು ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅರ್ಜಿದಾರರು ಒಂದೇ ಕುಟುಂಬಕ್ಕೆ ಸೇರಿರತಕ್ಕದ್ದಲ್ಲ; ಮತ್ತು]

[(ಬಿ-1) ಎಲ್ಲಾ ಅರ್ಜಿದಾರರು ಸಹಕಾರ ಸಂಘಗಳಾಗಿದ್ದಲ್ಲಿ ಅರ್ಜಿದಾರರ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆ ಇರತಕ್ಕದ್ದಲ್ಲ: ಪರಂತು, ರಾಜ್ಯ ಸರ್ಕಾರವು ವಿಶೇಷ ಪ್ರಕರಣಗಳಲ್ಲಿ ಅರ್ಜಿದಾರ ಸಹಕಾರ ಸಂಘಗಳ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆಯಿದ್ದರೂ ಅದನ್ನು ಅನುಮತಿಸಬಹುದು.]

(ಸಿ) ಅರ್ಜಿದಾರರಲ್ಲಿ ಬಿಡಿವ್ಯಕ್ತಿಯಾಗಿರುವ ಪ್ರತಿಯೊಬ್ಬನು ಹದಿನೆಂಟು ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ವ್ಯಕ್ತಿಯಾಗಿರತಕ್ಕುದು. [ಮತ್ತು ಅರ್ಜಿದಾರರು ಅದೇ ಕುಟುಂಬದವರಾಗಿರತಕ್ಕುದಲ್ಲ;

ವಿವರಣೆ. ಈ ಖಂಡದ ಉದ್ದೇಶಕ್ಕಾಗಿ, ವ್ಯಕ್ತಿಗೆ ಸಂಬಂಧಪಟ್ಟಂತೆ ಕುಟುಂಬ ಎಂದರೆ ಬಿಡಿವ್ಯಕ್ತಿ, ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಅವರನ್ನು ಅವಲಂಬಿಸಿರುವ ಮಕ್ಕಳು ಮತ್ತು ತಾಯಿತಂದೆಗಳು;]

(ಡಿ) ಸಹಕಾರ ಸಂಘದ ಉದ್ದೇಶಗಳು ಸದಸ್ಯರಿಗೆ ಸಾಲ ಕೊಡಲು ನಿಧಿಗಳ ಸೃಜನೆಯನ್ನು ಒಳಗೊಂಡಿದ್ದರೆ ಮತ್ತು ಎಲ್ಲ ಅರ್ಜಿದಾರರು ಬಿಡಿ ಅಂಥ ಅರ್ಜಿದಾರರು ಒಂದೇ ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ಅಥವಾ ಸಹಕಾರ ಸಂಘದ ಪ್ರಸ್ತಾವಿತ ಕಾರ್ಯಕ್ಷೇತ್ರದ ಪ್ರದೇಶದಲ್ಲಿ ವಾಸ ಮಾಡುವವರು ಅಥವಾ

ಒಂದೇ ಜನ ವರ್ಗಕ್ಕೆ ಸಂಬಂಧಿಸಿದವರು ಅಥವಾ ಒಂದೇ ವೃತ್ತಿಯನ್ನು ಅನುಸರಿಸುವವರು ಆಗಿರತಕ್ಕದು;

(ಇ) ಅರ್ಜಿದಾರರಲ್ಲಿ ವ್ಯಕ್ತಿಯಾಗಿರುವ ಪ್ರತಿಯೊಬ್ಬನೂ ಮತ್ತು ಅರ್ಜಿದಾರನಾಗಿರುವ ಯಾವುದೇ ಸಹಕಾರ ಸಂಘದ ಪರವಾಗಿ ಯುಕ್ತವಾಗಿ ಅಧಿಕೃತನಾದ ವ್ಯಕ್ತಿಯು ಅರ್ಜಿಗೆ ಸಹಿ ಮಾಡತಕ್ಕದು;

(ಎಫ್) ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ಶುಲ್ಕವನ್ನು ಸಲ್ಲಿಸಿರತಕ್ಕದ್ದು ಮತ್ತು ಸಹಕಾರ ಸಂಘಗಳ ಬೇರೆ ಬೇರೆ ವರ್ಗಕ್ಕೆ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.]

(ಜಿ) ಈ ಅಧಿನಿಯಮದ ಅಡಿಯಲ್ಲಿ ಸಹಕಾರ ಸಂಘವಾಗಿ ಪರಿವರ್ತನೆ ಹೊಂದುವ ಉದ್ದೇಶವನ್ನು ಹೊಂದಿರುವ ಸಹಕಾರಿಯ ಸಂದರ್ಭದಲ್ಲಿ, ಅಂಥ ಪರಿವರ್ತನೆಯನ್ನು ಅನುಮೋದಿಸುವ ಅಂಥ ಸಹಕಾರಿಯ ಸಾಮಾನ್ಯ ಸಭೆಯ ಗೊತ್ತುವಳಿಯು ಅರ್ಜಿಯ ಜೊತೆಯಲ್ಲಿ ಇರತಕ್ಕದ್ದು.]

**ಪ್ರಕರಣ-7:- ನೋಂದಣಿ.**-(1) ರಿಜಿಸ್ಟ್ರಾರನಿಗೆ-

(ಎ) ಅರ್ಜಿಯು ಈ ಅಧಿನಿಯಮದ, [ನಿಯಮಗಳ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ] ಉಪಬಂಧಗಳನ್ನು ಪಾಲಿಸಿದೆಯೆಂದು;

ಬಿ) ಪ್ರಸ್ತಾವಿತ ಸಂಘದ ಉದ್ದೇಶಗಳು 4ನೇ ಪ್ರಕರಣಕ್ಕನುಸಾರವಾಗಿವೆಯೆಂದು;

(ಸಿ) ಪ್ರಸ್ತಾವಿತ ಸಂಘದ ಧ್ಯೇಯಗಳು ಸಾಮಾಜಿಕ ನ್ಯಾಯದ ತತ್ವಗಳಿಗೆ ಅಸಂಗತವಾಗಿಲ್ಲವೆಂದು;

(ಡಿ) ಪ್ರಸ್ತಾವಿತ ಉಪವಿಧಿಗಳು ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿಲ್ಲವೆಂದು; ಮತ್ತು

(ಇ) ಪ್ರಸ್ತಾವಿತ ಸಂಘವು ಸುಭದ್ರ ವ್ಯವಹಾರದ ಅಗತ್ಯತೆಗಳನ್ನು ಪಾಲಿಸುವುದೆಂದು, ಮತ್ತು ಅದು ಯಶಸ್ವಿಯಾಗುವ ಸಮಂಜಸ ಅವಕಾಶವಿದೆ ಎಂದು-

ಮನದಟ್ಟಾದರೆ, [ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ] ಆ ಸಹಕಾರ ಸಂಘವನ್ನು ಮತ್ತು ಅದರ ಉಪವಿಧಿಗಳನ್ನು ನೋಂದಾಯಿಸತಕ್ಕದ್ದು

'ಮತ್ತು ಅರ್ಜಿಯಲ್ಲಿ ನಮೂದಿಸಿದ ಮುಖ್ಯ-ಪ್ರವರ್ತಕನಿಗೆ ಅಥವಾ ಪರಿವರ್ತನೆಗೊಂಡ ಸಹಕಾರಿಯ ಮುಖ್ಯ-ಕಾರ್ಯನಿರ್ವಾಹಕನಿಗೆ ನೋಂದಣಿ ಪ್ರಮಾಣ ಪತ್ರವನ್ನು ಮತ್ತು ನೋಂದಾಯಿತ ಉಪವಿಧಿಗಳ ಮೂಲ ಪ್ರತಿಯನ್ನು ದಿನಾಂಕ ಸಹಿತ ತನ್ನ ಸಹಿ ಹಾಗೂ ಮುದ್ರೆಯೊಡನೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು.

(2) ರಿಜಿಸ್ಟ್ರಾರನು, (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಅರ್ಜಿಯನ್ನು ವಿಲೇವಾರಿ ಮಾಡಲು ಸಾಧ್ಯವಾಗದಿದ್ದರೆ, ಅಂಥ ಸಂಘವು ಮತ್ತು ಅದರ ಉಪ-ವಿಧಿಗಳು ನೋಂದಣಿ ಮಾಡಲ್ಪಟ್ಟಿವೆಯೆಂದು ಭಾವಿಸತಕ್ಕುದು.]

(3) ಪ್ರಸ್ತಾವಿತ ಸಹಕಾರ ಸಂಘವನ್ನು ನೋಂದಾಯಿಸಲು ರಿಜಿಸ್ಟ್ರಾರನು ನಿರಾಕರಿಸಿದರೆ ಅವನು ತನ್ನ ನಿರ್ಣಯವನ್ನು ಅದರ ಕಾರಣ ಸಹಿತ ಅರ್ಜಿ ಸಲ್ಲಿಸಿದ ವ್ಯಕ್ತಿಗೆ ಮತ್ತು ಅರ್ಜಿ ಸಲ್ಲಿಸಿದವರು ಒಬ್ಬರಿಗಿಂತ ಹೆಚ್ಚಾ ತಿಳಿಸತಕ್ಕುದು. ಹೆಚ್ಚಾಗಿರುವಲ್ಲಿ, ಅರ್ಜಿಯಲ್ಲಿ ಮೊದಲು ಸಹಿ ಮಾಡಿದ ವ್ಯಕ್ತಿಗೆ ಆ ಕೂಡಲೇ ತಿಳಿಸತಕ್ಕದ್ದು.

(4) ರಿಜಿಸ್ಟ್ರಾರನು, ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಅಥವಾ ನೊಂದಾಯಿತವಾಗಿದೆಯೆಂದು ಭಾವಿಸಲಾದ ಎಲ್ಲ ಸಹಕಾರ ಸಂಘಗಳ ಒಂದು ರಿಜಿಸ್ಟರನ್ನು ಇಟ್ಟಿರತಕ್ಕುದು.]

**ಪ್ರಕರಣ -8:** - **ನೋಂದಣಿ ಪ್ರಮಾಣಪತ್ರ**.-ಈ ಅಧಿನಿಯಮದ ಮೇರೆಗೆ ಒಂದು ಸಹಕಾರ ಸಂಘವು ನೋಂದಾಯಿಸಲ್ಪಟ್ಟಿದ್ದರೆ, ಅಥವಾ ನೋಂದಾಯಿಸಲ್ಪಟ್ಟಿದೆ ಎಂದು ಭಾವಿಸಲ್ಪಟ್ಟರೆ] ರಿಜಿಸ್ಟ್ರಾರನು, ತಾನು ಸಹಿ ಮಾಡಿದ ಒಂದು ನೋಂದಣಿ ಪ್ರಮಾಣಪತ್ರವನ್ನು ಕೊಡತಕ್ಕುದು ಮತ್ತು ಆ ಪ್ರಮಾಣಪತ್ರವು ಅದರಲ್ಲಿ ನಮೂದಿಸಲಾದ ಸಹಕಾರ ಸಂಘವು ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ನೋಂದಾಯಿತವಾದ [ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಿದ] ಸಹಕಾರ ಸಂಘವಾಗಿದೆಯೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)

# <u>ಅನುಬಂಧ -3</u>

## ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ

**<u>ನಿಯಮ -3</u>** : **<u>ನೋಂದಣಿಯ ವಿಹಿತ ವಿಧಾನ</u>**.-(1) ಒಂದು ಸಹಕಾರ ಸಂಘವನ್ನು ಸಂಘಟಿಸಲು ಬಯಸುವ ಹತ್ತಕ್ಕೆ ಕಡಿಮೆ ಇಲ್ಲದ ವ್ಯಕ್ತಿಗಳ ಗುಂಪೊಂದು ಒಟ್ಟಿಗೆ ಸೇರಿ ಅವರಲ್ಲಿ ಒಬ್ಬ ಮುಖ್ಯ ಪ್ರವರ್ತಕನನ್ನು ಆಯ್ಕೆ ಮಾಡಿ ಅವನಿಗೆ ಸಹಾಯ ಮಾಡಲು ಕೆಲವು ಪ್ರವರ್ತಕರನ್ನು ನೇಮಿಸಿ ಆತನು ಪ್ರಸ್ತಾಪಿತ ಸಹಕಾರ ಸಂಘವನ್ನು ನೋಂದಾಯಿಸಲು ಕ್ರಮ ತೆಗೆದುಕೊಳ್ಳುವಂತೆ ಅಧಿಕಾರ ನೀಡಬಹುದು. ಅಂತಹ ವ್ಯಕ್ತಿಗಳ ಗುಂಪು ಪ್ರಸ್ತಾಪಿತ ಸಹಕಾರ ಸಂಘದ ಹೆಸರು ಮತ್ತು ಕಾರ್ಯಕ್ಷೇತ್ರವನ್ನು ನಿರ್ಧರಿಸಿ ಪ್ರಸ್ತಾಪಿತ ಸಹಕಾರ ಸಂಘದ ಉಪವಿಧಿಗಳನ್ನು ಅಳವಡಿಸಿಕೊಂಡು ಪ್ರಸ್ತಾಪಿತ ಸಹಕಾರ ಸಂಘದ ಸದಸ್ಯರಾಗಲು ಬಯಸುವ ವ್ಯಕ್ತಿಗಳಿಂದ ಅಗತ್ಯ ಷೇರು ಬಂಡವಾಳವನ್ನು ಸಂಗ್ರಹಿಸಲು ಮುಖ್ಯ-ಪ್ರವರ್ತಕನಿಗೆ ಅಧಿಕಾರ ನೀಡಲು ನಿರ್ಣಯಿಸತಕ್ಕದ್ದು.

(2) ಮುಖ್ಯ ಪ್ರವರ್ತಕನು ಪ್ರಸ್ತಾಪಿತ ಸಹಕಾರ ಸಂಘವನ್ನು ಸ್ಥಾಪಿಸಲು ಒಟ್ಟುಗೂಡಿರುವ ವ್ಯಕ್ತಿಗಳ ಪಟ್ಟಿ, ಅಂತಹ ಗುಂಪಿನ ವ್ಯಕ್ತಿಗಳ ಹೆಸರು, ವಿಳಾಸ ಮತ್ತು ಸಹಿಗಳನ್ನು ಸಭಾ ನಡವಳಿಗಳ ಪ್ರತಿ, ಪ್ರಸ್ತಾಪಿತ ಸಹಕಾರ ಸಂಘದ ಉಪವಿಧಿಗಳ ದ್ವಿಪ್ರತಿಗಳು ಮತ್ತು ಪ್ರಸ್ತಾಪಿತ ಸಹಕಾರ ಸಂಘವು ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಯುಕ್ತ ಅವಕಾಶಗಳೆರುವ ಮತ್ತು ಅದು ಸದೃಢವಾಗಿ ಬೆಳವಣಿಗೆ ಹೊಂದುವ ಸಾಧ್ಯತೆ ಇದೆ ಎಂಬುದನ್ನು ತೋರಿಸುವ ಪ್ರಾಜೆಕ್ಟ್ ವರದಿಯ ಸಹಿತ ವ್ಯಾಪ್ತಿಯುಳ್ಳ ರಿಜಿಸ್ಟ್ರಾರನನ್ನು ಸಂಪರ್ಕಿಸತಕ್ಕದ್ದು.

(3) ಪ್ರಸ್ತಾಪಿತ ಸಹಕಾರ ಸಂಘವು ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಯುಕ್ತ ಅವಕಾಶಗಳಿವೆ ಹಾಗೂ ಅದು ಆರ್ಥಿಕ ಸದೃಢತೆಯಿಂದ ಬೆಳವಣಿಗೆ ಹೊಂದುವ ಅವಕಾಶಗಳಿವೆ ಎಂದು ಮನಗಂಡಲ್ಲಿ ರಿಜಿಸ್ಟ್ರಾರನು ಪ್ರಸ್ತಾಪಿತ ಸಹಕಾರ ಸಂಘದ ಸದಸ್ಯರಾಗಲು ಬಯಸುವ ತಾನು ನಿಗದಿಪಡಿಸುವ ಅಂಥ ಸಂಖ್ಯೆಯ ವ್ಯಕ್ತಿಗಳಿಂದ ಅಂಥ ಷೇರು ಬಂಡವಾಳವನ್ನು ಅಂಥ ಅವಧಿಯೊಳಗೆ ಸಂಗ್ರಹಿಸಲು ಮುಖ್ಯ ಪ್ರವರ್ತಕನಿಗೆ ಅನುಮತಿ ನೀಡಬಹುದು.

(4) ರಿಜಿಸ್ಟ್ರಾರನಿಂದ ಅನುಮತಿ ಪಡೆದ ನಂತರ, ಮುಖ್ಯ ಪ್ರವರ್ತಕನು ಪ್ರಸ್ತಾಪಿತ ಸಹಕಾರ ಸಂಘದ ಹೆಸರಿನಲ್ಲಿ ರಶೀದಿ • ಪುಸ್ತಕಗಳನ್ನು ಮುದ್ರಣ ಮಾಡಿಸತಕ್ಕದ್ದು ಮತ್ತು ಪ್ರಸ್ತಾಪಿತ ಸಹಕಾರ ಸಂಘದ ಸದಸ್ಯರಾಗಬಯಸುವ ವ್ಯಕ್ತಿಗಳಿಂದ ಷೇರು ಬಂಡವಾಳವನ್ನು ಸಂಗ್ರಹಿಸತಕ್ಕದ್ದು. ಪ್ರಸ್ತಾಪಿತ ಸದಸ್ಯರಿಂದ ಸಂಗ್ರಹಿಸುವ ಮೊಬಲಗಿಗೆ ತನ್ನ ಹೆಸರು, ಪದನಾಮ ಮತ್ತು ಸಹಿಯೊಂದಿಗೆ ರಶೀದಿಗಳನ್ನು ನೀಡತಕ್ಕದ್ದು. ಆತನು ಸಂಗ್ರಹಿಸಿದ ಹಣವನ್ನು

ರಿಜಿಸ್ಟ್ರಾರನು ನಿಗದಿಪಡಿಸುವ ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಅಥವಾ ಸಹಕಾರ ಬ್ಯಾಂಕಿನಲ್ಲಿ ಏಳು ದಿನಗಳೊಳಗೆ ಠೇವಣಿ ಇಡತಕ್ಕದ್ದು. ಆತನು ಒಂದು ನಗದು ಪುಸ್ತಕ, ರಶೀದಿ ಪುಸ್ತಕ, ಓಚರ್ ಪುಸ್ತಕ ಮತ್ತು ತಾನು ಸಂಗ್ರಹಿಸಿ ಬ್ಯಾಂಕಿಗೆ ಪಾವತಿಸಿದ ಹಣಕ್ಕೆ ಇತರ ಲೆಕ್ಕಗಳನ್ನು ನಿರ್ವಹಿಸತಕ್ಕದ್ದು, ಆದಾಗ್ಯೂ ಆತನು ಮುದ್ರಣ, ಲೇಖನ ಸಾಮಗ್ರಿ, ಬೆರಳಚ್ಚು, ಅಂಚೆ ವೆಚ್ಚ, ಇತ್ಯಾದಿ ಪ್ರಾಸಂಗಿಕ ವೆಚ್ಚಗಳನ್ನು ಭರಿಸಲು ಅಗತ್ಯವಿರುವ ಮತ್ತು ತಕ್ಕಷ್ಟಾದ ಹಣವನ್ನು ಉಳಿಸಿಕೊಳ್ಳಲು ಸಕ್ಷಮನಿರತಕ್ಕದ್ದು.

(5) ನಿರ್ದಿಷ್ಟಪಡಿಸಿದ ಸಂಖ್ಯೆಯ ವ್ಯಕ್ತಿಗಳಿಂದ ರಿಜಿಸ್ಟ್ರಾರನು ಅನುಮತಿಸಿದ ಪ್ರಮಾಣದ ಷೇರು ಬಂಡವಾಳವನ್ನು ಸಂಗ್ರಹಿಸಿದ ನಂತರ. ಮುಖ್ಯ ಪ್ರವರ್ತಕನು ಪ್ರಸ್ತಾಪಿತ ಸಹಕಾರ ಸಂಘದ ಪ್ರವರ್ತಕರ ಸಭೆಯನ್ನು ಕರೆದು ಅದರಲ್ಲಿ ಷೇರು ಬಂಡವಾಳವನ್ನು ಸಂಗ್ರಹಿಸಿರುವ ಪ್ರಸ್ತಾಪಿತ ಸದಸ್ಯರುಗಳ ಹೆಸರುಗಳನ್ನು ಮತ್ತು ಜಮಾ ಖರ್ಚುಗಳ ವಿವರಗಳನ್ನು ಮಂಡಿಸತಕ್ಕದ್ದು. ಸದರಿ ಪ್ರವರ್ತಕರ ಸಭೆಯಲ್ಲಿ ನಿರ್ಣಯವಾದ ನಂತರ ಪ್ರಸ್ತಾಪಿತ ಸದಸ್ಯರ ಹೆಸರು ವಿಳಾಸಗಳುಳ್ಳ ಪಟ್ಟಿ ಮತ್ತು ಉಪವಿಧಿಗಳ ಐದು ಪ್ರತಿಗಳ ಸಹಿತ ಪ್ರಸ್ತಾಪಿತ ಸಹಕಾರ ಸಂಘದ ನೋಂದಣಿಗಾಗಿ ನಿಗದಿತ ಅರ್ಜಿಯಲ್ಲಿ ಪ್ರಸ್ತಾವವನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು. ಬಿಡಿ ವ್ಯಕ್ತಿಯಾಗಿರುವ ಪ್ರತಿಯೊಬ್ಬ ಅರ್ಜಿದಾರನು ಮತ್ತು ಯಾವುದೇ ಸಹಕಾರ ಹಕಾರ ಸಂಘವು ಅರ್ಜಿದಾರನಾಗಿದ್ದಲ್ಲಿ ಅದರ ಪರವಾಗಿ ಪ್ರಾಧಿಕೃತನಾದ ವ್ಯಕ್ತಿಯು ಸದರಿ ಅರ್ಜಿಗೆ ಸಹಿ ಮಾಡಿರತಕ್ಕದ್ದು ಮತ್ತು ಸದರಿ ಅರ್ಜಿಯು ನಿಗದಿತ ನೋಂದಣಿ ಶುಲ್ಕವನ್ನು ಪಾವತಿಸಿದ ಚಲನ್ ಅನ್ನು ಒಳಗೊಂಡಿರತಕ್ಕದ್ದು.]

**ನಿಯಮ [3-ಎ.] ನೋಂದಣಿಗಾಗಿ ಅರ್ಜಿ ಮತ್ತು ಕಾರ್ಯವಿಧಾನ**.-(1) 6ನೇ ಪ್ರಕರಣದ ಮೇರೆಗೆ ಸಹಕಾರ ಸಂಘದ ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು ಈ ನಿಯಮಗಳಿಗೆ ಲಗತ್ತಿಸಿದ 'ಎ' ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಆ ನಮೂನೆಯಲ್ಲಿ ಇರತಕ್ಕದು. ರಿಜಿಸ್ಟ್ರಾರನು ಸೂಚನೆಯನ್ನು ಕಳುಹಿಸಬಹುದಾದ ಅರ್ಜಿದಾರರ ಪೈಕಿ ಒಬ್ಬನ ಹೆಸರು ಮತ್ತು ವಿಳಾಸವನ್ನು ಅರ್ಜಿಯಲ್ಲಿ ನಮೂದಿಸತಕ್ಕುದು.

(2) 6ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಗೆ ಅರ್ಜಿದಾರರ ಪೈಕಿ ಒಬ್ಬನಾದ ಯಾವುದೇ ಸಹಕಾರ ಸಂಘದ ಪರವಾಗಿ ಅಧಿಕೃತನಾದ ವ್ಯಕ್ತಿಯು ಸಹಿ ಮಾಡಿರುವ ಸಂದರ್ಭಗಳಲ್ಲಿ, ಅಂಥ ಅಧಿಕಾರವನ್ನು ನೀಡುವ ಅಂಥ ಸಂಘದ ಮಂಡಲಿಯ ನಿರ್ಣಯದ ಪ್ರತಿಯನ್ನು ಅರ್ಜಿಗೆ ಲಗತ್ತಿಸತಕ್ಕುದು

2-ಎ) ಯಾವುದೇ ಸಹಕಾರ ಸಂಘದ ನೋಂದಣಿ ಅರ್ಜಿಯ ಜೊತೆಗೆ ಕೆಳಗೆ ನಿರ್ದಿಷ್ಟಪಡಿಸಿರುವಂತೆ ನೋಂದಣಿ ಶುಲ್ಕವನ್ನು ಪಾವತಿಸಿದ ಬಗ್ಗೆ ಖಜಾನೆ ಚಲನನ್ನು ಲಗತ್ತಿಸತಕ್ಕದ್ದು.

| ಕ್ರಮ ಸಂಖ್ಯೆ | ಸಂಘದ ವ್ಯಾಪ್ತಿಯು | ಹಣ ರೂ. ಗಳು |
|---|---|---|
| 1 | ತಾಲ್ಲೂಕಿಗಿಂತ ಕಡಿಮೆಯಾದಲ್ಲಿ | 500 |
| 2 | ತಾಲ್ಲೂಕು ಮತ್ತು ತಾಲ್ಲೂಕಿಗಿಂತ ಹೆಚ್ಚಾಗಿ ಆದರೆ ಜಿಲ್ಲೆಗಿಂತ ಕಡಿಮೆಯಾದಲ್ಲಿ | 1000 |
| 3 | ಜಿಲ್ಲೆ ಮತ್ತು ಜಿಲ್ಲೆಗಿಂತ ಹೆಚ್ಚಾದಲ್ಲಿ | 2000] |

ಪರಂತು, ಪರಿಶಿಷ್ಟ ಜಾತಿಗಳ ಅಥವಾ ಪರಿಶಿಷ್ಟ ಪಂಗಡಗಳ ಅಥವಾ ಹಿಂದುಳಿದ ವರ್ಗಗಳ ಅಥವಾ ಅಲ್ಪಸಂಖ್ಯಾತರ ಅಥವಾ ಮಹಿಳೆಯರ ವರ್ಗಗಳಿಗೆ ಸೇರಿರುವ ವ್ಯಕ್ತಿಗಳನ್ನೇ ಸದಸ್ಯರನ್ನಾಗಿ ಉಳ್ಳ ಸಹಕಾರ ಸಂಘಗಳ ಸಂಬಂಧದಲ್ಲಿ, ಪಾವತಿಸಬೇಕಾದ ನೋಂದಣಿ ಶುಲ್ಕವು ಗೊತ್ತುಪಡಿಸಿದ ಮೊತ್ತದ ಶೇಕಡಾ ಐವತ್ತಾಗಿರತಕ್ಕುದು.]

(3) ರಿಜಿಸ್ಟ್ರಾರನು, 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ಅವಶ್ಯವೆಂದು ಭಾವಿಸುವಂಥ ಹೆಚ್ಚಿನ ವಿವರಗಳನ್ನು ತರಿಸಿಕೊಳ್ಳಬಹುದು ಅಥವಾ ವಿಚಾರಣೆಯನ್ನು ಮಾಡಬಹುದು. ಅರ್ಜಿಯೊಡನೆ ಒಪ್ಪಿಸಲಾದ ಪ್ರಸ್ತಾಪಿತ ಉಪವಿಧಿಗಳು ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ಇರುವಂತೆ ಮಾಡುವುದಕ್ಕಾಗಿ, ಅವುಗಳಿಗೆ ಅಂಥ ಬದಲಾವಣೆಯನ್ನು ಅಥವಾ ಸೇರ್ಪಡೆಯನ್ನು ಮಾಡಬೇಕೆಂದು ಅರ್ಜಿದಾರರು ಅಪೇಕ್ಷಿಸಿದಲ್ಲಿ, ಅವನು ಅರ್ಜಿದಾರರಿಗೆ ಲಿಖಿತದಲ್ಲಿ ಅನುಮತಿ ನೀಡಬಹುದು.

(4) ರಿಜಿಸ್ಟ್ರಾರನು ಸಹಕಾರ ಸಂಘವನ್ನು ನೋಂದಾಯಿಸಲು ನಿರಾಕರಿಸಿದರೆ, ಅವನು ನಿರಾಕರಣೆಯ ಆದೇಶವನ್ನು (1)ನೇ ಉಪ-ನಿಯಮದ ಮೇರೆಗಿನ ಅರ್ಜಿಯಲ್ಲಿ ನಮೂದಿಸಿದ ಅರ್ಜಿದಾರನಿಗೆ ನೋಂದಾಯಿತ ಅಂಚೆ ಮೂಲಕ ತಿಳಿಸತಕ್ಕುದು.

**<u>ನಿಯಮ 3-ಬಿ:</u>** - ನೋಂದಣಿ ಸಮಯದಲ್ಲಿ ನೋಂದಣಿ ಪ್ರಾಧಿಕಾರದಿಂದ ಪರಿಗಣಿಸಲ್ಪಡಬೇಕಾದ ಅಂಶಗಳು.-ನೋಂದಣಿ ಪ್ರಾಧಿಕಾರವು ಸಹಕಾರ ಸಂಘದ ನೋಂದಣಿಯ ಸಂದರ್ಭದಲ್ಲಿ ಪ್ರಾರಂಭಿಕ ಷೇರು ಬಂಡವಾಳವನ್ನು ಸಂಗ್ರಹಿಸಲು ಅನುಮತಿ ನೀಡುವ ಸಂದರ್ಭದಲ್ಲಿ ಈ ಕೆಳಕಂಡವುಗಳನ್ನು ಪರಿಗಣಿಸತಕ್ಕದ್ದು, ಎಂದರೆ.-

(i) ಪ್ರಸ್ತಾವಿತ ಸಹಕಾರ ಸಂಘವು ಕಾರ್ಯಾಚರಣೆ ನಡೆಸುವ ಪ್ರದೇಶದ ಜನ ಸಂಖ್ಯೆ:

(ii) ಷೇರುದಾರರಿಂದ ಷೇರುಗಳ ಮತ್ತು ನಿಧಿ ಸಂಗ್ರಹಣೆಯಂತಹ ಆರ್ಥಿಕ ಮತ್ತು ಹಣಕಾಸಿನ ಸಂಭವನೀಯತೆ (feasibility)ಯ ನಿರ್ಧರಣೆ (assessment);

(iii) ಅಸ್ತಿತ್ವದಲ್ಲಿರುವಂತಹ ಅದೇ ಮಾದರಿಯ ಸಹಕಾರ ಸಂಘಗಳ ಪರಸ್ಪರ 2 (overlapping);

(iv) ಕರಡು ಉಪ-ವಿಧಿಗಳು ಅಧಿನಿಯಮ ಮತ್ತು ನಿಯಮಗಳಿಗನುಸಾರ-ವಾಗಿವೆಯೇ.]

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)

# ಅನುಬಂಧ-4

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗಿರುವ ವಿವಿಧ ರೀತಿಯ ಸಹಕಾರ ಸಂಘಗಳ ವಿವರ

| ಕ್ರ.ಸಂ | ವಿಧ | ದಕ್ಷಿಣ ಕನ್ನಡ | | | | ಉಡುಪಿ | | | |
|---|---|---|---|---|---|---|---|---|---|
| | | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು |
| 1 | ಬಹುರಾಜ್ಯ ಮಟ್ಟದ ಸಹಕಾರ ಸಂಘಗಳು | 2 | 0 | 0 | 2 | 0 | 0 | 0 | 0 |
| 2 | ರಾಜ್ಯ ಮಟ್ಟದ ಸಹಕಾರ ಮಹಾಮಂಡಲಗಳು (ಅಪೆಕ್ಸ್ ಬ್ಯಾಂಕ್, ಕಾಸ್ಕಾರ್ಡ್ ಬ್ಯಾಂಕ್ ನ್ನು ಒಳಗೊಂಡಿದೆ) ಸಂಘಗಳು | 0 | 0 | 1 | 1 | 0 | 0 | 0 | 0 |
| 3 | ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ | 1 | 0 | 0 | 1 | 0 | 0 | 0 | 0 |
| 4 | ಪ್ರಾ.ಸ.ಕೃ.ಅಭಿವೃದ್ಧಿ ಮತ್ತು ಗ್ರಾಮೀಣ ಬ್ಯಾಂಕ್ ನಿ., | 5 | 0 | 0 | 5 | 3 | 0 | 0 | 3 |
| 5 | ಪ್ರಾ.ಕೃ.ಪತ್ತಿನ ಸಹಕಾರ ಸಂಘಗಳು | 116 | 0 | 1 | 117 | 54 | 0 | 0 | 54 |
| 6 | ಲ್ಯಾಂಪ್ಸ್ ಸಹಕಾರ ಸಂಘಗಳು | 5 | 0 | 0 | 5 | 3 | 0 | 0 | 3 |
| 7 | ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು | 0 | 1 | 0 | 1 | 0 | 0 | 0 | 0 |
| 8 | ಸಹಕಾರಿ ಗ್ರೇನ್ ಬ್ಯಾಂಕುಗಳು | 2 | 0 | 0 | 2 | 0 | 0 | 0 | 0 |
| 9 | ಪಟ್ಟಣ ಸಹಕಾರ ಬ್ಯಾಂಕುಗಳು | 8 | 0 | 0 | 8 | 6 | 0 | 0 | 6 |
| 10 | ಇತರೆ ಪತ್ತಿನ ಸಹಕಾರ ಸಂಘಗಳು | 40 | 6 | 1 | 47 | 81 | 0 | 3 | 84 |
| 11 | ನೌಕರರ ಪತ್ತಿನ ಸಹಕಾರ ಸಂಘಗಳು | 26 | 1 | 1 | 28 | 12 | 0 | 0 | 12 |
| 12 | ತಾ.ವ್ಯ.ಮಾ.ಸ.ಸಂ. (TAPCMS) | 5 | 0 | 0 | 5 | 3 | 0 | 0 | 3 |
| 13 | ಇತರೆ ಮಾರಾಟ ಸಹಕಾರ ಸಂಘಗಳು | 1 | 0 | 2 | 3 | 0 | 0 | 0 | 0 |
| 14 | ಸಹಕಾರಿ ಸಕ್ಕರೆ ಕಾರ್ಖಾನೆಗಳು | 0 | 0 | 0 | 0 | 1 | 0 | 0 | 1 |
| 15 | ಸಂಸ್ಕರಣ ಸಹಕಾರ ಸಂಘಗಳು | 4 | 0 | 0 | 4 | 0 | 0 | 0 | 0 |

| | | | | | | | | | |
|---|---|---|---|---|---|---|---|---|---|
| 16 | ಸಹಕಾರಿ ನೂಲಿನ ಗಿರಣಿಗಳು | 0 | 0 | 0 | 0 | 0 | 0 | 0 | 0 |
| 17 | ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳು | 0 | 0 | 0 | 0 | 1 | 0 | 0 | 1 |
| 18 | ಲೈವ್‌ಸ್ಟಾಕ್ ಸಹಕಾರ ಸಂಘಗಳು | 1 | 1 | 1 | 3 | 1 | 0 | 1 | 2 |
| 19 | ಹಾಲು ಉತ್ಪಾದಕರ ಸಹಕಾರ ಸಂಘಗಳು | 404 | 1 | 4 | 409 | 343 | 0 | 0 | 343 |
| 20 | ಸಹಕಾರಿ ಹಾಲು ಒಕ್ಕೂಟ | 1 | 0 | 0 | 1 | 0 | 0 | 0 | 0 |
| 21 | ಸಂಯುಕ್ತ ಬೇಸಾಯ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 22 | ಏತ ನೀರಾವರಿ ಸಹಕಾರ ಸಂಘಗಳು | 1 | 0 | 0 | 1 | 0 | 0 | 0 | 0 |
| 23 | ನೀರು ಬಳಕೆದಾರರ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 24 | ಮೀನುಗಾರಿಕಾ ಸಹಕಾರ ಸಂಘಗಳು | 21 | 3 | 1 | 25 | 56 | 0 | 1 | 57 |
| 25 | ನೇಕಾರರ ಸಹಕಾರ ಸಂಘಗಳು | 4 | 0 | 1 | 5 | 4 | 0 | 0 | 4 |
| 26 | ಇತರೆ ಕೈಗಾರಿಕಾ ಸಹಕಾರ ಸಂಘಗಳು | 1 | 0 | 1 | 2 | 23 | 0 | 2 | 25 |
| 27 | ಕೈಗಾರಿಕಾ ಸಹಕಾರ ಸಂಘಗಳು | 8 | 2 | 2 | 12 | 0 | 0 | 0 | 0 |
| 28 | ಗ್ರಾಹಕರ ಸಹಕಾರ ಸಂಘಗಳು | 8 | 0 | 0 | 8 | 15 | 0 | 1 | 16 |
| 29 | ಕೇಂದ್ರ ಸಗಟು ಮಾರಾಟ ಮಳಿಗೆ (CCWS) | 1 | 0 | 0 | 1 | 0 | 0 | 0 | 0 |
| 30 | ಗೃಹ ನಿರ್ಮಾಣ ಸಹಕಾರ ಸಂಘಗಳು | 21 | 3 | 2 | 26 | 7 | 0 | 1 | 8 |
| 31 | ಅರಣ್ಯ ಕೂಲಿಕಾರರ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 32 | ಕೂಲಿಕಾರರ ಸಹಕಾರ ಸಂಘಗಳು | 0 | 0 | 0 | 0 | 1 | 0 | 0 | 1 |
| 33 | ಜಿಲ್ಲಾ ಸಹಕಾರ ಒಕ್ಕೂಟ | 2 | 0 | 0 | 2 | 1 | 0 | 0 | 1 |
| 34 | ಜಿಲ್ಲಾ ಸಹಕಾರ ಮಹಾಮಂಡಳ | 0 | 0 | 0 | 0 | 0 | 0 | 0 | 0 |
| 35 | ವಿವಿದೋದ್ದೇಶ ಸಹಕಾರ ಸಂಘಗಳು | 62 | 5 | 4 | 71 | 58 | 1 | 0 | 59 |
| 36 | ವಿದ್ಯಾರ್ಥಿ ಗ್ರಾಹಕರ ಸಹಕಾರ ಸಂಘಗಳು | 6 | 0 | 0 | 6 | 2 | 0 | 0 | 2 |
| 37 | ಕ್ಷೌರಿಕ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 38 | ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು | 19 | 3 | 3 | 25 | 18 | 0 | 2 | 20 |

| | | | | | | | | | |
|---|---|---|---|---|---|---|---|---|---|
| 39 | ಗರೀಬಿ ಹಟಾವೊ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 40 | ದರ್ಜಿಗಳ ಸಹಕಾರ ಸಂಘಗಳು | 0 | 0 | 0 | 0 | 1 | 0 | 0 | 0 |
| 41 | ಚರ್ಮ ಹದ ಮಾಡುವವರ ಸಹಕಾರ ಸಂಘಗಳು | 0 | 1 | 0 | 1 | 1 | 0 | 0 | 1 |
| 42 | ಮರ ಬೆಳೆಗಾರರ ಸಹಕಾರ ಸಂಘಗಳು | 0 | 0 | 0 | 0 | 1 | 0 | 0 | 1 |
| 43 | ಹ್ಯಾಂಡ್ ಪೌಂಡಿಂಗ್ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 1 |
| 44 | ಮಡಿವಾಳ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 45 | ವಿದ್ಯುತ್‌ಶಕ್ತಿ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 46 | ಸಾರಿಗೆ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 47 | ಸಹಕಾರ ಆಸ್ಪತ್ರೆಗಳು | 1 | 0 | 1 | 2 | 0 | 0 | 0 | 0 |
| 48 | ಸಹಕಾರ ಮುದ್ರಣಾಲಯಗಳು | 0 | 0 | 0 | 0 | 0 | 0 | 0 | 0 |
| 49 | ಉಣ್ಣೇ ನೇಕಾರರ ಸಹಕಾರ ಸಂಘಗಳು | 0 | 0 | 0 | 0 | 0 | 0 | 0 | 0 |
| 50 | ಇತರೆ ಸಹಕಾರ ಸಂಘಗಳು | 62 | 3 | 3 | 68 | 6 | 0 | 2 | 8 |
| | ಒಟ್ಟು | 838 | 30 | 29 | 897 | 702 | 1 | 13 | 716 |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)

# ಅನುಬಂಧ -5

## ನೇಮಕಾತಿ ನಿಯಮಗಳು

## ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ

**ನಿಯಮ 17 :- ಸಹಕಾರ ಸಂಘಗಳ ಅಧಿಕಾರಿಗಳು ಮತ್ತು ನೌಕರರ ಅರ್ಹತೆಗಳು, ಇತ್ಯಾದಿ.**-[(1) ಸಾಮಾನ್ಯ ನಿಕಾಯದಿಂದ ಮಂಜೂರಾದ ಆಯವ್ಯಯ ಹಂಚಿಕೆಗೊಳಪಟ್ಟು, ಸಹಕಾರ ಸಂಘದ ಆಡಳಿತ ಮಂಡಲಿಯು, ಕಾಲಕಾಲಕ್ಕೆ ಸಹಕಾರ ಸಂಘದ ಕಾರ್ಯಭಾರ ಮತ್ತು ವ್ಯವಹಾರದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಸಹಕಾರ ಸಂಘದ ಸಿಬ್ಬಂದಿಯ ಬಲವನ್ನು ಮತ್ತು ಸಹಕಾರ ಸಂಘದ ಆರ್ಥಿಕ ಸ್ಥಿತಿಯನ್ನು ಆಧರಿಸಿ ಅದರ ಪ್ರತಿಯೊಬ್ಬ ಸಿಬ್ಬಂದಿಗೆ ಲಭ್ಯವಾಗತಕ್ಕ ವೇತನ ಶ್ರೇಣಿ ಮತ್ತು ಇನ್ನಿತರ ಭತ್ಯೆಗಳನ್ನು ನಿರ್ಧರಿಸತಕ್ಕದ್ದು:

ಪರಂತು ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ನಿರಂತರವಾಗಿ ನಷ್ಟಕ್ಕೊಳಗಾಗಿರುವ ಅಥವಾ ಸಂಚಿತ ನಷ್ಟಕ್ಕೊಳಗಾಗಿರುವ ಅಥವಾ ಹಿಂದಿನ ವರ್ಷಾಂತ್ಯಕ್ಕೆ ಇದ್ದಂತೆ ದುಡಿಯುವ ಬಂಡವಾಳ ಅಥವಾ ವಹಿವಾಟಿಗೆ ಹೋಲಿಸಿದಲ್ಲಿ ಸಿಬ್ಬಂದಿ ಖರ್ಚಿನ ಅನುಪಾತವು ಶೇಕಡಾ 2 ರಷ್ಟಕ್ಕಿಂತ ಹೆಚ್ಚಾಗಿರುವ ಸಹಕಾರ ಸಂಘದ ಸಂಬಂಧದಲ್ಲಿ, ಸಹಕಾರ ಸಂಘದ ಎಲ್ಲಾ ಉದ್ಯೋಗಿಗಳ ಸಂಬಳಗಳ, ಭತ್ಯೆಗಳ, ಪ್ರಯಾಣ ಭತ್ಯೆಗಳ, ರಜೆ ಸಂಬಳಗಳ, ಗ್ರಾಚುಯಿಟಿಯ, ಭವಿಷ್ಯನಿಧಿ ವಂತಿಗೆಗಳ ಮೇಲಿನ ಎಲ್ಲಾ ಖರ್ಚುಗಳು ಮತ್ತು ಅಂಥ "[ಅಂತಹ ಯಾವುದೇ ನಿರ್ಧರಣೆಯಲ್ಲಿ ಸರ್ಕಾರದ ಪೂರ್ವಭಾವಿ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ವೇತನ ಶ್ರೇಣಿ ಮತ್ತು ಇತರ ಭತ್ಯೆಗಳ ಹೆಚ್ಚಳದ ಸಂಬಂಧ ನಿಬಂಧಕರ ಪೂರ್ವಭಾವಿ ಅನುಮೋದನೆಯನ್ನು ಪಡೆಯತಕ್ಕದ್ದು].

ವಿವರಣೆ: ಉಪ-ನಿಯಮ (1)ರ ಉದ್ದೇಶಕ್ಕಾಗಿ,

(ಎ) ಸಿಬ್ಬಂದಿ ಖರ್ಚು" ಎಂದರೆ ಸಹಕಾರ ಸಂಘದ, ಎಲ್ಲಾ ಉದ್ಯೋಗಿಗಳ ಸಂಬಳಗಳ, ಭತ್ಯೆಗಳ, ಪ್ರಯಾಣ ಭತ್ಯೆಗಳ, ರಜೆ ಸಂಬಳಗಳ, ಗ್ರಾಚುಯಿಟಿಯ, ಭವಿಷ್ಯನಿಧಿ ವಂತಿಗೆಗಳ ಮೇಲಿನ ಎಲ್ಲಾ ಖರ್ಚುಗಳು ಮತ್ತು ಅಂಥ ಇತರ ಸಂಬಂಧಿತ ಖರ್ಚುಗಳು.

(ಬಿ) "ದುಢಿಯುವ ಬಂಡವಾಳ" ಎಂದರೆ ಒಟ್ಟು ಪಾವತಿಯಾದ ಷೇರು ಬಂಡವಾಳ, ಕಾಯ್ದಿಟ್ಟ ನಿಧಿಗಳು, ಇತರೆ ನಿಧಿಗಳು, ಠೇವಣಿಗಳು, ಬಾಹ್ಯ ಸಾಲಗಳು ಮತ್ತು ಕಟ್ಟಡಗಳಲ್ಲಿ ಮತ್ತು ಇತರೆ ಸ್ಥಿರ ಸ್ವತ್ತುಗಳಲ್ಲಿ ತೊಡಗಿಸದೆ ಇರುವ ಹಂಚಿಕೆಯಾಗದ ಲಾಭಗಳು.

(ಸಿ) "ವಹಿವಾಟು" ಎಂದರೆ ಉದರಿ ಹಂಚಿಕೆಯಾಗದ ಮತ್ತು ದಳ್ಳಾಳಿ ಆಧಾರದ ಮೇಲೆ ಮಾಡಿದ ಮಾರಾಟಗಳನ್ನು ಒಳಗೊಂಡಂತೆ ವರ್ಷದಲ್ಲಿ ಮಾಡಿದ ಮಾರಾಟಗಳು, ಆದರೆ ಸರ್ಕಾರದ ಸಾರ್ವಜನಿಕ ವಿತರಣೆಯ ವ್ಯವಸ್ಥೆಯ ಅಡಿಯಲ್ಲಿ ನಿಯಂತ್ರಿತ ಸರಕುಗಳ ಮಾರಾಟದ ಸಂಬಂಧದಲ್ಲಿ ಶೇಕಡಾ 50 ರ ಅಂಥ ಮಾರಾಟಗಳನ್ನು ಮಾರಾಟ ವಹಿವಾಟಿನಿಂದ ಹೊರಗಿಡತಕ್ಕದ್ದು:

ಪರಂತು, ಯಾವುದೇ ಸಹಕಾರ ಸಂಘದಲ್ಲಿ ಯಾವಾಗಲಾದರೂ ಯಾವುದೇ ಹೊಸ ಹುದ್ದೆಯನ್ನು ಸೃಜಿಸಿದರೆ ಅಥವಾ ಯಾವುದೇ ಭತ್ಯೆಗಳನ್ನು ಹೆಚ್ಚಿಸಿದರೆ ಅಥವಾ ಯಾವುದೇ ವೇತನ ಶ್ರೇಣಿಗಳ ಪರಿಷ್ಕರಣೆಯನ್ನು ಕಾರ್ಯಗತಗೊಳಿಸಿದರೆ, ಅಂಥ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ಅವುಗಳ ಆರ್ಥಿಕ ಪರಿಣಾಮಗಳನ್ನು ಮಂಡಲಿಯ ಠರಾವನ್ನು ಮತ್ತು ಸಮರ್ಥನೆಗಳನ್ನು ಉಳ್ಳ ಪೂರ್ಣವಿವರಗಳ ವಸ್ತುಸ್ಥಿತಿ ವರದಿಯನ್ನು ರಿಜಿಸ್ಟ್ರಾರನಿಗೆ ಕಳಿಸತಕ್ಕದ್ದು.

ಮತ್ತೂ ಪರಂತು ಈ ಬಗ್ಗೆ ರಿಜಿಸ್ಟ್ರಾರನು ಸಹಕಾರ ಸಂಘಗಳಿಗೆ ಅವಶ್ಯವಾದ ಮಾರ್ಗಸೂಚಿಗಳನ್ನು ನೀಡಬಹುದಾಗಿದೆ:

(provided also that).-

(ಎ) ಕೃಷಿ ಸಾಲ ರಚನಾ ರೂಪದ ಸಹಕಾರ ಸಂಘಗಳ ಸಂಬಂಧ ವೃಂದ ಸಾಮರ್ಥ್ಯವು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ / ನಿರ್ದಿಷ್ಟಪಡಿಸಿದ ಮತಿಯನ್ನು. ಮಾನವ ಸಂಪನ್ಮೂಲ ನೀತಿಯನ್ನು ನಿರ್ದಿಷ್ಟಪಡಿಸಿದ್ದಲ್ಲಿ ಮೀರತಕ್ಕದ್ದಲ್ಲ;

(ಬಿ) ಕರ್ನಾಟಕ ಹಾಲು ಉತ್ಪಾದಕ ಮಹಾ ಮಂಡಳದ ವೃಂದ ಸಾಮರ್ಥ್ಯವು, ಒಂದು ವೇಳೆ ನಿರ್ದಿಷ್ಟಪಡಿಸಿದ್ದಲ್ಲಿ. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯು ನಿರ್ದಿಷ್ಟಪಡಿಸಿದ ರೀತ್ಯ ಇರತಕ್ಕದ್ದು;

ಸಿ) ನಗರ ಪ್ರದೇಶ ಬ್ಯಾಂಕುಗಳ ವೃಂದ ಸಾಮರ್ಥ್ಯವು ಭಾರತೀಯ ರಿಜರ್ವ್ ( ಬ್ಯಾಂಕ್ ನಿರ್ದಿಷ್ಟಪಡಿಸಿದ ಮಿತಿಯನ್ನು ಮೀರತಕ್ಕದ್ದಲ್ಲ ಅಥವಾ ರಾಷ್ಟ್ರೀಕೃತ - ಬ್ಯಾಂಕುಗಳು ಅಳವಡಿಸಿಕೊಂಡಿರುವ ಮಾದರಿಯಲ್ಲಿರತಕ್ಕದ್ದು;

(ಡಿ) ಇನ್ನಿತರ ಸಹಕಾರ ಸಂಘಗಳ ವೃಂದ ಸಾಮರ್ಥ್ಯವು ನಿಬಂಧಕರು ನಿರ್ದಿಷ್ಟಪಡಿಸಿದ ಮಿತಿಯನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು ಉಪ-ನಿಯಮ (1)ಕ್ಕೆ ಒಳಪಟ್ಟು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಭಾರತೀಯ ರಿಜರ್ವ್ ಬ್ಯಾಂಕ್, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ ಮಾರ್ಗಸೂಚಿಗಳ ಅನುಪಸ್ಥಿತಿಯಲ್ಲಿ,

ಅಂತಹ ಮಾರ್ಗಸೂಚಿಗಳನ್ನು ಸಹಕಾರ ಸಂಘಗಳ ನಿಬಂಧಕರು ನಿರ್ದಿಷ್ಟಪಡಿಸತಕ್ಕದ್ದು.]

(2) ಯಾವನೇ ವ್ಯಕ್ತಿಯು ಕೆಳಗೆ ನಮೂದಿಸಿದ ಹುದ್ದೆಗಳಿಗೆ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿದ್ದ ಹೊರತು, ಆ ಹುದ್ದೆಗಳಿಗೆ ನೇಮಕಗೊಳ್ಳಲು ಅರ್ಹನಾಗತಕ್ಕುದಲ್ಲ

ಕೃಷಿ ಸಾಲ ರಚನೆ, ಕರ್ನಾಟಕ ಹಾಲು ಉತ್ಪಾದಕ ಮಹಾ ಮಂಡಳ ಮತ್ತು ಜಿಲ್ಲಾ ಹಾಲು ಉತ್ಪಾದಕ ಸಂಘ, ನಗರ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಪದನಾಮ (designation) ಮತ್ತು ವಿದ್ಯಾರ್ಹತೆಯ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ರೀತ್ಯ ಇರತಕ್ಕದ್ದು' | ಮತ್ತು ಅಂತಹ ಇನ್ನಿತರ ಸಹಕಾರ ಸಂಘಗಳಿಗೆ : ಸಹಕಾರ ಸಂಘಗಳ ನಿಬಂಧಕರು ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

ಎ. ಕನಿಷ್ಠ ಅರ್ಹತೆಗಳನ್ನು ವಿಧಿಸುವುದು.-

(1) ನೇಮಕಾತಿ.-(ಎ) ಸಹಕಾರಿ ಸಂಘದಲ್ಲಿರುವ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅವುಗಳೆಂದರೆ.- ಈ ಕೆಳಕಂಡಂತೆ ಕನಿಷ್ಟ ಅರ್ಹತೆಗಳಿರಬೇಕು.

ಅವುಗಳೆಂದರೆ:-

| ಹುದ್ದೆಗಳ ದರ್ಜೆಗಳು | ಕನಿಷ್ಠ ಅರ್ಹತೆ |
|---|---|
| (1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | (i) ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯ ಪದವಿಯಲ್ಲಿ ಉತ್ತೀರ್ಣರಾಗಿರಲೇಬೇಕು;<br>(ii) ಎಸ್.ಎಸ್.ಎಲ್.ಸಿ. ಅಥವಾ ಇದಕ್ಕೆ ಸರಿಸಮಾನವಾದ ಪರೀಕ್ಷೆಯಲ್ಲಿ *ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಲೇಬೇಕು;<br>(iii) ಸರ್ಕಾರದಿಂದ ಅಂಗೀಕೃತಗೊಂಡ ಸಂಸ್ಥೆಯಿಂದ ಮೂಲ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಕೋರ್ಸ್‌ನ್ನು ಮಾಡಿರಲೇಬೇಕು: ಮತ್ತು<br>(iv) ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾನಿಯದ ಸಹಕಾರದಲ್ಲಿ ಪದವಿ ಪಡೆದಿದ್ದರೆ ಅಂಥ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು. |
| (2) ಪ್ರಥಮ ದರ್ಜೆ ಸಹಾಯಕ | (i) ಭಾರತದ ಕಾನೂನಿನ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು;<br>(ii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು |

| | |
|---|---|
| | ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು; ಮತ್ತು<br>(iii) ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು. |
| (3)ದ್ವಿತೀಯ ದರ್ಜೆಯ ಸಹಾಯಕ | (i) ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು.<br>(ii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು: ಮತ್ತು<br>(iii) ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಜ್ಞಾನವಿರಬೇಕು. |
| (4) ಸ್ಟೆನೋಗ್ರಾಫರ್ಸ್ | (i) ದ್ವಿತೀಯ ಪಿ.ಯು.ಸಿ.ಯಲ್ಲಿ ಅಥವಾ ಮೂರು ವರ್ಷದ ಡಿಪ್ಲೊಮಾ ಇನ್ ಕಮಿರ್ಷಿಯಲ್ ಪ್ರಾಕ್ಟಿಸ್‌ನಲ್ಲಿ ಉತ್ತೀರ್ಣರಾಗಿರಬೇಕು;<br>(ii) ಸೀನಿಯರ್ ಕನ್ನಡ/ಇಂಗ್ಲಿಷ್ ಶೀಘ್ರಲಿಪಿಯಲ್ಲಿ(Shorthand) ಉತ್ತೀರ್ಣರಾಗಿದ್ದು, ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು.<br>(iii) ಸೀನಿಯರ್ ಕನ್ನಡ ಇಂಗ್ಲಿಷ್ ಟೈಪ್ ರೈಟಿಂಗ್‌ನಲ್ಲಿ ಉತ್ತೀರ್ಣರಾಗಿದ್ದು, ಮ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು; ಮತ್ತು<br>(iv) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ,ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| (5) ಟೈಪಿಸ್ಟ್/ಡಾಟಾ ಎಂಟ್ರಿ ಅಪರೇಟರ್/ ಕಂಪ್ಯೂಟರ್ ಆಪರೇಟರ್ | (1) ದ್ವಿತೀಯ ಪಿ.ಯು.ಸಿ.ಯಲ್ಲಿ ಅಥವಾ ಮೂರು ವರ್ಷದ ಡಿಪ್ಲೊಮಾ ಇನ್ ಕಮಿರ್ಷಿಯಲ್ ಪ್ರಾಕ್ಟಿಸ್‌ನಲ್ಲಿ ಉತ್ತೀರ್ಣರಾಗಿರಬೇಕು.<br>(ii) ದ್ವಿತೀಯ ಪಿ.ಯು.ಸಿ.ಯಲ್ಲಿ ಅಥವಾ ಮೂರು ವರ್ಷದ ಡಿಪ್ಲೊಮಾ ಇನ್ ಕಮಿರ್ಷಿಯಲ್ ಪ್ರಾಕ್ಟಿಸ್‌ನಲ್ಲಿ ಉತ್ತೀರ್ಣರಾಗಿರಬೇಕು. ಸೀನಿಯರ್ ಕನ್ನಡ/ ಇಂಗ್ಲಿಷ್ ಟೈಪ್‌ರೈಟಿಂಗ್ ನಲ್ಲಿ ಉತ್ತೀರ್ಣರಾಗಿದ್ದು, ಕಂಪ್ಯೂಟರ್ ಅಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು; ಮತ್ತು |

| | |
|---|---|
| | ( iii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| (6) ಕಂಪ್ಯೂಟರ್ ಪ್ರೋಗ್ರಾಮರ್ | ಕಾನೂನಿನಿಂದ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾನಿಲಯದಿಂದ ಕಂಪ್ಯೂಟರ್ ಅಪ್ಲಿಕೇಷನ್ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. |
| (7) ಅಕೌಂಟೆಂಟ್/ ಅಕೌಂಟ್ ಅಸಿಸ್ಟೆಂಟ್ | (i) ಭಾರತೀಯ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಾಣಿಜ್ಯ/ಸಹಕಾರ/ನಿರ್ವಹಣೆ ಪದವೀಧರರಾಗಿರಬೇಕು.<br>(ii) ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್ ಜ್ಞಾನದ ಜೊತೆಗೆ ಟ್ಯಾಲಿ ಕೋರ್ಸ್‌ನ ತೇರ್ಗಡೆ ಪತ್ರವನ್ನು ಹೊಂದಿರಬೇಕು: ಮತ್ತು<br>(iii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| (8) ಸೇಲ್ಸ್ ಅಸಿಸ್ಟೆಂಟ್ | (i) ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣ;<br>(ii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು; ಮತ್ತು<br>(ii) ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವನ್ನು ಹೊಂದಿರಬೇಕು. |
| (9) ಡ್ರೈವರ್ | (i) ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.;<br>(ii) ಕಾನೂನುಬದ್ಧ ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು. |
| (10) ಅಟೆಂಡರ್ | ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. |

ii) ಪದೋನ್ನತಿ-(ಎ) ಪ್ರಸ್ತುತ ವ್ಯಕ್ತಿಯು ಹೊಂದಿರುವ ಹುದ್ದೆಗೆ ನೇರನೇಮಕಾತಿಗಾಗಿ ನಿರ್ಧರಿಸಲಾದ ಕನಿಷ್ಠ ವಿದ್ಯಾರ್ಹತೆ ಹೊಂದಿದ್ದು, ಸಹಕಾರಿ ಸಂಘದ ಒಬ್ಬ ಉದ್ಯೋಗಿಯಾಗಿರುವ ಮತ್ತು ಈ ರೀತಿ ತಾನು

ಹೊಂದಿರುವ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳು ಸಂತೃಪ್ತಿಯಾಗಿ ಸೇವೆ ಸಲ್ಲಿಸಿರುವವರು ಉನ್ನತ ಹುದ್ದೆಗೆ ಪದೋನ್ನತಿ ಪಡೆಯಲು ಅರ್ಹರೆಂದು ಪರಿಗಣಿಸಲಾಗಿದೆ:

ಪರಂತು, ಸಂಘದ ಉದ್ಯೋಗಿಯಲ್ಲದ ವ್ಯಕ್ತಿಯು/ ಅಂಗೀಕೃತಗೊಂಡ ಸಂಸ್ಥೆಗಳು ಹಮ್ಮಿಕೊಂಡ ಹೈಯರ್ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಹೆಚ್‌ಡಿಸಿಎಂ)/ಡಿಪ್ಲೊಮಾ ಇನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಸಿಬಿಎಂ)/ ಡಿಪ್ಲೊಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ)/ಜನರಲ್ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಜಿಡಿಸಿ)/ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಡಿಸಿಎಂ) ಕೋರ್ಸ್‌ಗಳಲ್ಲಿ ಯಶಸ್ವಿಯಾಗಿ ಉತ್ತೀರ್ಣರಾಗಿರದಿದ್ದರೆ ಮುಂದಿನ ಉನ್ನತ ಹುದ್ದೆಗೆ ಬಡ್ತಿ ಪಡೆಯುವಂತಿಲ್ಲ.

[ಮತ್ತು ಪರಂತು, ಕರ್ನಾಟಕದ ಸಹಕಾರ ಸಂಘಗಳು (ತಿದ್ದುಪಡಿ) ನಿಯಮಗಳು, 2017ರ ಪ್ರಾರಂಭದ ದಿನಾಂಕದಿಂದ ಇಪ್ಪತ್ತಾಲ್ಕು ತಿಂಗಳ ಅವಧಿಯ ನಂತರ ಈ ಮೇಲಿನ ಪ್ರಸ್ತಾವವು ಅನ್ವಯವಾಗತಕ್ಕದ್ದು.]

(ಬಿ) ಸಹಕಾರಿ ಸಂಘದ ಮಂಡಳಿಯು ಸಹಕಾರಿ ಸಂಘದ ಒಬ್ಬ ಉದ್ಯೋಗಿಯನ್ನು ಹೈಯರ್ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಹೆಚ್‌ಡಿಸಿಎಂ)/ಡಿಪ್ಲೊಮಾ ಇನಾ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಸಿಬಿಎಂ)/ಡಿಪ್ಲೊಮಾ ಇನಾ ಕೋ-ಆಪರೇಟಿವ್ ಬ್ಯಾಂಕಿಂಗ್" ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ)/ ಜನರಲ್ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಜಿಡಿಸಿ)/ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಡಿಸಿಎಂ) ಕೋರ್ಸ್‌ಗಳಿಗೆ ಡೆಪ್ಯೂಟ್ ಮಾಡುತ್ತದೆ ಮತ್ತು ಈ ಕೋರ್ಸ್‌ಗೆ ಹಾಜರಾಗುವುದಕ್ಕಾಗಲೀ ಮತ್ತು ಮುಕ್ತಾಯಗೊಳಿಸುವುದಕ್ಕಾಗಲೀ ಈ ಮಂಡಳಿಯ ರುಜುವಾತನ್ನು ಮಂಜೂರು ಮಾಡುವುದಿಲ್ಲ.]

[(ಸಿ) ನೆರವು ಪಡೆದ ಸಂಘದ ಸಂಬಂಧದಲ್ಲಿ, ಕೆಳಗಿನ ಕೋಷ್ಟಕದ ಕಾಲಂ (2)ರಲ್ಲಿ ನಮೂದಿಸಿರುವ ಗ್ರೂಪ್ 'ಎ' ಅಧಿಕಾರಿಗಳ ಮಟ್ಟದ ಅಧಿಕಾರಿಗಳನ್ನು ಸರ್ಕಾರವು ಮತ್ತು ಗ್ರೂಪ್ 'ಬಿ' ಅಧಿಕಾರಿಗಳ ಮಟ್ಟದವರೆಗಿನ ಅಧಿಕಾರಿಗಳನ್ನು ಗಿರಾಜಿ ಮಾಡಿ ರಿಜಿಸ್ಟ್ರಾರನು ನೆರವು ಪಡೆದ ಸಹಕಾರ ಕಾರ್ಯನಿರ್ವಾಹಕರೆಂಬುದಾಗಿ ನೇಮಿಸತಕ್ಕದ್ದು.

ಕೋಷ್ಟಕ

| ಸಂಘಗಳ ವಿಂಗಡಣೆ | ಮುಖ್ಯ-ಕಾರ್ಯನಿರ್ವಾಹಕರಾಗಿ ನೇಮಕಗೊಳ್ಳುವ ಅಧಿಕಾರಿಗಳ ಕೇಡರ್ |
|---|---|
| ಎಲ್ಲಾ ಸಹಕಾರ ಸಂಘಗಳ ಕಾರ್ಯಕ್ಷೇತ್ರವು | - |
| (i) ಜಿಲ್ಲೆಗಿಂತ ಕಡಿಮೆಯಾದಲ್ಲಿ | ಸಹಕಾರ ಸಂಘಗಳ ಹಿರಿಯ ಪರಿವೀಕ್ಷಕರ ದರ್ಜೆಗಿಂತ ಕಡಿಮೆಯಿಲ್ಲದ |
| (ii) ಜಿಲ್ಲೆಗೆ ವಿಸ್ತರಿಸಿದರಲ್ಲಿ | ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರನ ದರ್ಜೆಗಿಂತ ಕಡಿಮೆಯಿಲ್ಲದ |
| (iii) ಜಿಲ್ಲೆಗೆ ಮೀರಿದಲ್ಲಿ (ಅಪೆಕ್ಸ್ ಸಂಘಗಳು ಸೇರಿದಂತೆ) | ಸಹಕಾರ ಸಂಘಗಳ ಉಪ-ರಿಜಿಸ್ಟ್ರಾರನ ದರ್ಜೆಗಿಂತ ಕಡಿಮೆಯಿಲ್ಲದ]] |

[ಪರಂತು ಉಪ-ನಿಯಮ (2)ರಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಥವಾ ರಾಜ್ಯ ಸಹಕಾರ ಬ್ಯಾಂಕಿನ ಮುಖ್ಯ-ಕಾರ್ಯನಿರ್ವಾಹಕನಾಗಿ ನೇಮಕವಾಗುವ ವ್ಯಕ್ತಿಯು ಭಾರತೀಯ ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ನಿಗದಿಪಡಿಸುವ ಅರ್ಹತೆ ಮತ್ತು ಅನುಭವವನ್ನು ಹೊಂದಿರತಕ್ಕದ್ದು.]

(3) ಹುದ್ದೆಗಳನ್ನು ಅಧಿಸೂಚಿಸಿ ಅರ್ಹರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯುವ ಮೂಲಕವಲ್ಲದೆ, ಮಾಡತಕ್ಕುದಲ್ಲ: ನೇರ ನೌಕರಿ ಭರ್ತಿಯ ಮೂಲಕ ಯಾವುದೇ ನೇಮಕವನ್ನು ಮಾಡತಕ್ಕದ್ದಲ್ಲ.

[ಪರಂತು ಈ ನಿರ್ಬಂಧವು.-

(i) ಸರ್ಕಾರದಿಂದ ಎರವಲು ಸೇವೆಯ ಮೇಲೆ ಮಾಡುವ ಅಧಿಕಾರಿಯ ನೇಮಕ

(ii) ನಿಯಮಗಳ ಪ್ರಕಾರ ಅನುಕಂಪದ ಆಧಾರದ ಮೇಲೆ ಯಾವುದೇ ಹುದ್ದೆಗೆ ಮಾಡುವ ಭರ್ತಿ;;

-ಗಳಿಗೆ ಅನ್ವಯವಾಗತಕ್ಕುದಲ್ಲ.

(4) ಸಹಕಾರ ಸಂಘದ ವ್ಯವಸ್ಥಾಪನಾ ಮಂಡಳಿಯು "ಹೊರಗುತ್ತಿಗೆ" ಆಧಾರದ ಮೇಲೆ ಸಹಕಾರ ಸಂಘದ ಸೇವಾ ಹಿತದೃಷ್ಟಿಯಿಂದ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿ ಸಹಕಾರ ಸಂಘಡಸ್ಟಾರ್ ಅನುಮೋದನೆಯೊಂದಿಗೆ

ದ್ವಿತೀಯ ದರ್ಜೆಯ ಸಹಾಯಕ ಅಥವಾ ಸರಿಸಮಾನತೆಯ ಮತ್ತು ಕೇಡರ್ ದರ್ಜೆಯ ಕೆಳಗಿನ ಹುದ್ದೆಗಳ ನೇಮಕ] ಮಾಡಿಕೊಳ್ಳಬಹುದು.

**ನಿಯಮ 17-ಎ.** ನೇರ ನೇಮಕಾತಿಗಾಗಿ ನೇಮಕಾತಿ ಸಮಿತಿಯ ರಚನೆ-ನೇರ ನೇಮಕಾತಿಗಾಗಿ ನೇಮಕಾತಿ ಸಮಿತಿಯು ಕೆಳಕಂಡಂತಿರತಕ್ಕದ್ದು, ಎಂದರೆ.-

| | | |
|---|---|---|
| (i). | ಸಂಬಂಧಪಟ್ಟ ಸಹಕಾರ ಸಂಘಗಳ ಅಧ್ಯಕ್ಷ | ಅಧ್ಯಕ್ಷ |
| (ii) | ಸಂಘದ ಮಂಡಳಿಯಿಂದ ಓರ್ವ ನಿರ್ದೇಶಕನನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು | ಸದಸ್ಯ |
| (iii) | ಸಹಕಾರ ಸಂಘಗಳ ನಿಬಂಧಕರು ಅಥವಾ ಅವರಿಂದ ನಾಮ ನಿರ್ದೇಶಿತನಾದ ಅಧಿಕಾರಿಯು ಸಹಕಾರ ಸಂಘಗಳ ಸಹಾಯಕ ನಿಬಂಧಕರ ದರ್ಜೆಗಿಂತ ಕಡಿಮೆ ಇಲ್ಲದ | ಸದಸ್ಯ |
| (iv) | ಸಹಕಾರ ಸಂಘದ ಮಂಡಳಿಯಿಂದ ನಾಮ ನಿರ್ದೇಶಿತನಾದ ಸಹಕಾರ ಕ್ಷೇತ್ರದ ವಿಷಯದಲ್ಲಿ ಅದರಲ್ಲೂ ವಿಶೇಷವಾಗಿ ಸಂಬಂಧಪಟ್ಟ ಸಹಕಾರ ಸಂಘದ ವಿಷಯದಲ್ಲಿ ಅನುಭವ ಹೊಂದಿರುವ [ಸಹಕಾರಿ ಸಂಘದ ನಿರ್ದೇಶಕರನ್ನು ಹೊರತುಪಡಿಸಿ] | ಸದಸ್ಯ |
| (v) | ಸಂಘದ ಮುಖ್ಯ ಕಾರ್ಯನಿರ್ವಾಹಕ | ಸದಸ್ಯ ಕಾರ್ಯದರ್ಶಿ |

(2) ಸಭೆಯ ಕನಿಷ್ಠ ಕೋರಂ ಮೂರು ಮಂದಿ ಇರತಕ್ಕದ್ದು. [ಸಹಕಾರಿ ಸಂಘದ ರಿಜಿಸ್ಟ್ರಾರ್ ಒಳಗೊಂಡಂತೆ ಅಥವಾ ಅವರು ಸೂಚಿಸಿದ ವ್ಯಕ್ತಿ.]

**ನಿಯಮ-18:-** ಸಹಕಾರಿ ಸಂಘದ ಉದ್ಯೋಗಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳ ವಿಧಾನ ~(1) ನೇರ ನೇಮಕಾತಿಯ ಮೂಲಕ ನೇಮಕ.-

(ಎ) ಸಹಕಾರ ಸಂಘವು ಕಾರ್ಯ ನಿರ್ವಹಿಸುತ್ತಿರುವ ಪ್ರದೇಶದಲ್ಲಿ ಅತಿ ಹೆಚ್ಚಿನ ಪ್ರಸರಣ ಸಂಖ್ಯೆಯನ್ನು ಹೊಂದಿರುವ ಕೊನೇ ಪಕ್ಷ ಒಂದಕ್ಕಿಂತ ಹೆಚ್ಚಿನ ಕನ್ನಡ ಪತ್ರಿಕೆಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳ ಮೂಲಕ ಕರೆಯಲಾಗಿದ್ದರೆ ಮತ್ತು ಒಂದು ಸಹಕಾರ ಸಂಘವು ತಾಲ್ಲೂಕು ಮಟ್ಟಕ್ಕಿಂತ ಮೇಲಿನ ಪ್ರದೇಶಗಳಲ್ಲಿ ಕಾರ್ಯಾಚರಣೆಯನ್ನು ಮಾಡುತ್ತಿದ್ದರೆ ಮೇಲೆ ತಿಳಿಸಲಾದ

ರೀತಿಯಲ್ಲೇ ಕೊನೆಪಕ್ಷ ಹೆಚ್ಚು ಪ್ರಸರಣ ಸಂಖ್ಯೆಯನ್ನು ಹೊಂದಿರುವ ಒಂದಕ್ಕಿಂತ ಹೆಚ್ಚಿನ ಕನ್ನಡ ವೃತ್ತಪತ್ರಿಕೆಯಲ್ಲಿ ಮತ್ತು ಇಂಗ್ಲಿಷ್ ವೃತ್ತಪತ್ರಿಕೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದ್ದರೆ ಅಂಥವರನ್ನು ಹೊರತುಪಡಿಸಿ ನೇರನೇಮಕಾತಿಯನ್ನು ಮಾಡಿಕೊಳ್ಳುವುದಿಲ್ಲ:

ಪರಂತು. ಈ ಮೇಲಿನ ನಿಯಮಗಳು.-

(1) ಸರ್ಕಾರದಿಂದ ಸೇವೆಗಳನ್ನು ಎರವಲು ಪಡೆದ ಒಬ್ಬ ಅಧಿಕಾರಿಯ ನೇಮಕಕ್ಕೆ:

(ii) ನಿಯಮಗಳ ಪ್ರಕಾರ, ಅನುಕಂಪದ ಮುಖಾಂತರ ಹುದ್ದೆಯನ್ನು ತುಂಬಲಾಗಿದ್ದರೆ.

-ಅಂತಹ ವ್ಯಕ್ತಿಗಳಿಗೆ ಅನ್ವಯಿಸುವುದಿಲ್ಲ.

(ಬಿ) ನಿಯಮ 17-ಎ ಪ್ರಕಾರ, ಯಾವಾಗಲಾದರೂ ಅವಶ್ಯಕತೆ ಇದ್ದರೆ ನೇಮಕಾತಿಗಾಗಿ/ಬಡ್ತಿಗಾಗಿ ಸಮಿತಿಯನ್ನು ರಚಿಸುತ್ತದೆ.

(ಸಿ) ದ್ವಿತೀಯ ದರ್ಜೆಯ ಸಹಾಯಕ ಮತ್ತು ಇದರ ಮೇಲ್ಪಟ್ಟ ಹುದ್ದೆಗಳಿಗೆ ನೇಮಕಾತಿಗಾಗಿ.-200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲಿಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರಿ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನಕ್ಕಾಗಿ 25 ಅಂಕಗಳು ಹಾಗೂ ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳಿಗೆ 25 ಅಂಕಗಳು ಒಳಗೊಂಡಿರುತ್ತವೆ. [x X X X] ಈ ರೀತಿ ಲಿಖಿತ ಪರೀಕ್ಷೆಯಲ್ಲಿ ಅಥವಾ ತಾಂತ್ರಿಕ ಪರೀಕ್ಷೆಯಲಿ ಪಡೆಯಲಾದ ಅಂಕಗಳ ಶೇಕಡಾವಾರು ಆಧಾರದ ಮೇಲೆ, 1:58 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಅಂಕಗಳನ್ನು ಶೇಕಡಾ 85ಕ್ಕಿಳಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು.

(ಡಿ) ಕಂಪ್ಯೂಟರ್ ಪ್ರೋಗ್ರಾಮರ್, ಡಾಟಾ ಎಂಟ್ರಿ ಆಪರೇಟರ್, ಸ್ಟೆನೋಗ್ರಾಫರ್ ಮತ್ತು ಟೈಪಿಸ್ಟ್ ಹುದ್ದೆಗಳ ನೇಮಕಾತಿಯಲ್ಲಿ ಸಂಬಂಧಪಟ್ಟ ಕ್ಷೇತ್ರದಲ್ಲಿ ನೈಪುಣ್ಯತೆಯ ಪರೀಕ್ಷೆಯ ಆಧಾರದ ಮೇಲೆ ಅವಕಾಶ ನೀಡಲಾಗುವುದು. ಈ ಸಂಬಂಧ 200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲಿಷ್ ಗಾಗಿ 25 ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು ಮತ್ತು ಕಂಪ್ಯೂಟರ್ ಪರೀಕ್ಷೆ ಮತ್ತು ಶಾರ್ಟ್ ಹ್ಯಾಂಡ್ ಅಥವಾ ಟೈಪಿಂಗ್ ಹಾಗೂ ಪ್ರಕರಣಕ್ಕೆ ತಕ್ಕಂತೆ 100 ಅಂಕಗಳಿರುವುದು. [xxxx] ಈ ರೀತಿ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಶೇಕಡಾವಾರು ಆಧಾರಕ ಮೇಲೆ, 1:58 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ

ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇಕಡಾ 85ಕ್ಕಿಳಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು.

(ಇ) ಡ್ರೈವರ್ಸ್ ಮತ್ತು ಗ್ರೂಪ್ 'ಡಿ' ಸೇವಗಳ ಹುದ್ದೆಗಳಿಗೆ ನೇಮಕಾತಿಗಾಗಿ, ಈ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಅರ್ಹತೆಯುಳ್ಳ ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡು ಪ್ರತಿಶತ ಅಂಕಗಳ ಆಧಾರದ ಮೇಲೆ 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಪರೀಕ್ಷೆಯಲ್ಲಿ ಅರ್ಹತೆಯುಳ್ಳ ಪಡೆಯಲಾದ ಅಂಕಗಳನ್ನು ಶೇಕಡಾ 85ಕ್ಕಿಳಿಸಿ ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು.

(ಎಫ್) ಉಪ-ನಿಯಮಗಳು (ಸಿ), (ಡಿ) ಮತ್ತು (ಇ)ಗಳ ಪ್ರಕಾರ, ಲಿಖಿತ ಪರೀಕ್ಷೆ/ತಾಂತ್ರಿಕ ಪರೀಕ್ಷೆ/ಅರ್ಹತೆಯುಳ್ಳ ಪರೀಕ್ಷೆಗಳಲ್ಲಿ ಪಡೆಯಲಾದ ಅಂಕಗಳನ್ನು ಶೇಕಡಾ 85ಕ್ಕ ಇಳಿಸಲಾಗುವುದು ಮತ್ತು ಈ ರೀತಿ ಕಡಿತ ಮಾಡಲಾದ ನಂತರ ಪಡೆಯಲಾದ ಅಂಕಗಳು ಮತ್ತು ಸಂದರ್ಶನದಲ್ಲಿ ಪಡೆಯಲಾದ ಅಂಕಗಳನ್ನು ಒಟ್ಟುಗೂಡಿಸಲಾಗುವುದು ಮತ್ತು ಲಿಖಿತ ಪರೀಕ್ಷೆ/ತಾಂತ್ರಿಕ ಪರೀಕ್ಷೆ/ಅರ್ಹತಾ ಪರೀಕ್ಷೆಗಳಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ ರಚಿಸಲಾದ ಪ್ರತಿಭಾನಿತರ ಪಟ್ಟಿಯಲ್ಲಿ ಯಶಸ್ವಿಯಾಗಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಈ ರೀತಿ ಆಯ್ಕೆ ಮಾಡಲಾದ ಪ್ರತಿಭಾನ್ವಿತ ಪಟ್ಟಿಯ ಆಧಾರದ ಮೇಲೆ ಅನ್ವಯಿಸಬಹುದಾದ ಮೀಸಲಾತಿ ನೀತಿಯನ್ನು ಅನುಸರಿಸಿ ಆದ್ಯತೆ ನೀಡಲಾಗುವುದು.

(ಜಿ) ಮಂಡಳಿಯಿಂದ ಆಯ್ಕೆ ಪಟ್ಟಿಯು ಅನುಮೋದನೆಯಾದ ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ನೇಮಕಾತಿ ಆದೇಶ ನೀಡುತ್ತಾರೆ. ಆದಾಗ್ಯೂ, ಯಾವುದೇ ಸಹಕಾರಿ ಸಂಘದ ಮಂಡಳಿಯ ಕಚೇರಿಯ ಅವಧಿ ಮುಗಿಯುವ ಕೊನೆಯ ಮೂರು ತಿಂಗಳ ಮುಂಚೆ ಯಾವುದೇ ನೇಮಕಾತಿ ಪ್ರಕ್ರಿಯೆಗಳನ್ನು ಮಾಡಲಾಗುವುದಿಲ್ಲ.

(2) ನೇರನೇಮಕಾತಿಯ ಆಯ್ಕೆಗೆ ವಯೋಮಿತಿ-(1) ಸಹಕಾರಿ ಸಂಘಗಳ ಸೇವೆಗಳ ಯಾವುದೇ ಹುದ್ದೆಗೆ ನೇರನೇಮಕಾತಿ ಹೊಂದುವ ಪ್ರತಿಯೊಬ್ಬ ಅಭ್ಯರ್ಥಿಯು 18 ವರ್ಷ ವಯಸ್ಸನ್ನು ಮುಗಿಸಿರಬೇಕು ಮತ್ತು ಆದರೆ ಅವರು.-

(i) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ-1ಕ್ಕೆ ಸೇರಿರುವ ವ್ಯಕ್ತಿಗಳಾಗಿದ್ದಲ್ಲಿ ಅವರು 40 ವರ್ಷ ವಯೋಮಿತಿ ಹೊಂದಿರಬೇಕು;

(ii) ಒಂದು ವೇಳೆ ಇತರೆ ಹಿಂದುಳಿದ ವರ್ಗಕ್ಕೆ ಸೇರಿರುವ ವ್ಯಕ್ತಿಗಳಿಗೆ ವಯೋಮಿತಿಯು 38 ವರ್ಷಗಳು.

ವಿವರಣೆ-ಈ ಖಂಡ (ii)ರ ಉದ್ದೇಶಕ್ಕಾಗಿ "ಇತರೆ ಹಿಂದುಳಿದ ವರ್ಗ" ಎಂದರೆ, ನೇಮಕಾತಿ ಉದ್ದೇಶಕ್ಕಾಗಿ 2-ಎ, 2-ಬಿ. 3ರ ಮತ್ತು ಬಿಯಾಗಿ ವರ್ಗೀಕರಿಸಲಾಗಿರುವ ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿದ ವ್ಯಕ್ತಿಗಳು.

(iii) ಇತರರಿಗೆ ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ವಯೋಮಿತಿ 35 ವರ್ಷಗಳು.

(3) ಅನುಕಂಪದ ಆಧಾರಗಳ ಮೇಲೆ ಉದ್ಯೋಗ-ಉಪ-ನಿಯಮ (2)ರಲ್ಲಿ ಏನೇ

ಒಳಗೊಂಡಿದ್ದಾಗ್ಯೂ, ಸಹಕಾರಿ ಸಂಘದ ಮರಣ ಹೊಂದಿದ ಪುರುಷ ಅಥವಾ ಸ್ತ್ರೀ ಉದ್ಯೋಗಿಯು ವಿಧುರ ಅಥವಾ ವಿಧವೆಯಾಗಿದ್ದರೆ ಈ ಹುದ್ದೆಯ ನೇಮಕಾತಿಗಾಗಿ ಗರಿಷ್ಠ ವಯೋಮಿತಿಯನ್ನು 10 ವರ್ಷಗಳಷ್ಟು ಹೆಚ್ಚಿಸಲಾಗುತ್ತದೆ :

ಪರಂತು, ಸಹಕಾರಿ ಸಂಘದ ಪುರುಷ ಉದ್ಯೋಗಿಯು ಮರಣ ಹೊಂದಿದ್ದರೆ ಅನುಕಂಪದ ಆಧಾರದ ಮೇಲೆ ಈ ಕೆಳಕಂಡಂತೆ ನೇಮಕಾತಿಗೆ ಅರ್ಹರಾಗಿರುತ್ತಾರೆ. ಅವರುಗಳೆಂದರೆ.

(1) ವಿಧವೆ; ಅಥವಾ

(ii) ಒಂದು ವೇಳೆ ಅಭ್ಯರ್ಥಿಯು ವಿಧವೆಯಾಗಿದ್ದು ಯಾವುದೇ ಒಂದು ಯುಕ್ತ ಕಾರಣದಿಂದಾಗಿ ಉದ್ಯೋಗವನ್ನು ಮಾಡಲು ಅನರ್ಹಳಾಗಿದ್ದು, ಈ ಹುದ್ದೆಯನ್ನು ಸ್ವೀಕರಿಸುವುದಕ್ಕೆ ಇಷ್ಟಪಡದಿದ್ದಲ್ಲಿ ಅವಳ ಮಗ; ಅಥವಾ

(iii) ಒಂದು ವೇಳೆ ಅಭ್ಯರ್ಥಿಯು ವಿಧವೆ ಮತ್ತು ಆಕೆಯ ಮಗ ಯಾವುದೇ ಒಂದು ಯುಕ್ತ ಕಾರಣದಿಂದಾಗಿ ಅನರ್ಹರಾಗಿ ಈ ಹುದ್ದೆಯನ್ನು ನಿರ್ವಹಿಸಲು ಇಷ್ಟಪಡದಿದ್ದರೆ, ಆಗ ವಿಧವೆ ಅವಿವಾಹಿತ ಮಗಳು:

ಮತ್ತೂ ಪರಂತು, ಸಹಕಾರಿ ಸಂಘದ ಸ್ತ್ರೀ ಮರಣ ಹೊಂದಿದ್ದರೆ ಅನುಕಂಪದ ಆಧಾರದ ಮೇಲೆ ಈ ಕೆಳಕಂಡಂತೆ ನೇಮಕಾತಿಗೆ ಅರ್ಹರಾಗಿರುತ್ತಾಳೆ, ಅವರುಗಳೆಂದರೆ-

(i) ಒಬ್ಬ ಮಗ; ಅಥವಾ

(ii) ಅಂಥ ಸ್ತ್ರೀ ಉದ್ಯೋಗಿಯ ಮಗ ಯಾವುದೇ ಯುಕ್ತ ಕಾರಣದಿಂದ ಅನರ್ಹತೆಯನ್ನು ಹೊಂದಿದ್ದು ಉದ್ಯೋಗವನ್ನು ಸ್ವೀಕರಿಸಲು ಇಷ್ಟಪಡದಿದ್ದರೆ ಆಗ, ಅವಿವಾಹಿತ ಮಗಳು; ಅಥವಾ

(iii) ಒಂದು ವೇಳೆ ಅಭ್ಯರ್ಥಿಯ ಮಗ ಅಥವಾ ಮಗಳು ಯಾವುದೇ ಒಂದು ಯುಕ್ತ ಕಾರಣದಿಂದಾಗಿ ಅನರ್ಹರಾಗಿ ಈ ಹುದ್ದೆಯನ್ನು ನಿರ್ವಹಿಸಲು ಇಷ್ಟಪಡದಿದ್ದರೆ ಆಗ ವಿಧುರ.

(4) ಸೇವಾ ಷರತ್ತುಗಳು.-(1) ನಿವೃತ್ತಿಯ ವಯಸ್ಸು-ಸಹಕಾರಿ ಸಂಘದ ಯಾವುದೇ ಅಧಿಕಾರಿ ಅಥವಾ ಉದ್ಯೋಗಿಯನ್ನು ಹುದ್ದೆಯಿಂದ ತೆಗೆದುಹಾಕಬೇಕಾದ ಅಥವಾ ನಿವೃತ್ತಿಗೊಳಿಸಬೇಕಾದ ದಿನಾಂಕವು ಅಂಥ ಉದ್ಯೋಗಿಯು ಅರವತ್ತು ವರ್ಷಗಳನ್ನು ಸಂಪೂರ್ಣಗೊಳಿಸುವ ಕೊನೆಯ ತಿಂಗಳ ಕೊನೆಯ ದಿನವಾಗಿರಬೇಕು:

ಪರಂತು, ಸಹಕಾರಿ ಸಂಘದ ಯಾವ ಆಧಿಕಾರಿ ಅಥವಾ ಉದ್ಯೋಗಿಯೊಬ್ಬರ ನಿವೃತ್ತಿಯ ದಿನಾಂಕ ಆ ತಿಂಗಳ ಮೊದಲನೇಯ ದಿನವಾಗಿದ್ದರೆ, ಆತನು 60 ವರ್ಷ ವಯಸ್ಸನ್ನು ಪೂರೈಸುವ ಆ ತಿಂಗಳ ಕೊನೆಯ ದಿನದ ಮಧ್ಯಾನವೆಂದು ಪೂರ್ವಭಾವನೆ ತೆಗೆದುಕೊಳ್ಳಲಾಗುತ್ತದೆ.

(ii) ಸ್ವಯಂ ನಿವೃತ್ತಿ-ಸಹಕಾರಿ ಸಂಘದ ಯಾವುದೇ ಉದ್ಯೋಗಿಯು ಸಂಘದ ಸೇವೆಯಿಂದ ಸ್ವಯಂ ನಿವೃತ್ತಿ ತೆಗೆದುಕೊಳ್ಳಲು ಬಯಸಿದರೆ ಅತನು ಹದಿನೈದು ವರ್ಷಗಳು ತೃಪ್ತಿದಾಯಕ ಸೇವೆಯನ್ನು ಸಲ್ಲಿಸಿರಬೇಕು ಸಂಪೂರ್ಣಗೊಳಿಸಿರಬೇಕು: ಅಥವಾ 50 ವರ್ಷಗಳನ್ನು ಸಂಪೂರ್ಣಗೊಳಿಸಿರಬೇಕು.

ಮತ್ತೂ ಪರಂತು, ಈ ಸಂಬಂಧ ಸಂಘದ ಬೈಲಾನಲ್ಲಿ ಸ್ವಯಂ ನಿವೃತ್ತಿ ಯೋಜನೆಯ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ.

(5) ಇತರ ಸೇವಾ ಷರತ್ತುಗಳು.-ಸಹಕಾರಿ ಸಂಘಗಳ ಉದ್ಯೋಗಿಗಳ ರಜಾ ಸೌಕರ್ಯ, ಗ್ರಾಜ್ಯುಟಿ, ನಡತೆ ಮತ್ತು ಶಿಸ್ತಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ನಿಯಮಗಳು ಸಂಘದ ಬೈಲಾದಲ್ಲಿ ಕೊಡಲಾಗಿರುತ್ತದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)